ಒಡೆಯನ ಕರೆ

[ಪವಿತ್ರ ಕುರ್‌ಆನಿನ ಆಯ್ದ ಸೂಕ್ತಗಳ
ಅರ್ಥ ಮತ್ತು ವ್ಯಾಖ್ಯಾನ]

ಡಾ. ಮಲಿಕ್ ಹಬೀಬುಲ್ಲಾಹ್

ಪರಮ ದಯಾಮಯ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಪವಿತ್ರ ಕುರ್‌ಆನ್ ಜಗದೊಡೆಯನಾದ ಅಲ್ಲಾಹನ ಅಂತಿಮ ಗ್ರಂಥ. ಈ ಜಗತ್ತಿನಲ್ಲಿರುವ ಧರ್ಮಗ್ರಂಥಗಳ ಪೈಕಿ ಯಾವುದೇ ಮಾನವ ಹಸ್ತಕ್ಷೇಪಕ್ಕೆ ಒಳಗಾಗದೆ ಅಕ್ಷರಶಃ ಮೂಲ ರೂಪದಲ್ಲಿ ಉಳಿದಿರುವ ಏಕೈಕ ಗ್ರಂಥ. ಜಗತ್ತಿನ ಮಾನವರೆಲ್ಲರೂ ಅದರ ಅಭಿಸಂಬೋಧಿತರು. ಅದು ಮಾನವರಿಗೆ ನೀಡುವ ಸಂದೇಶದ ಆಯ್ದ ವಚನಗಳ ಅರ್ಥ ಮತ್ತು ಸಂಕ್ಷಿಪ್ತ ವಿವರಣೆಯೇ ಈ ಕೃತಿ.

ಉರ್ದು ಭಾಷೆಯ ಓರ್ವ ಉತ್ತಮ ಬರಹಗಾರರೂ ಪಂಡಿತರೂ ಆದ ಮಲಿಕ್ ಹಬೀಬುಲ್ಲಾಹ್‌ರವರ ಆ ಪುಸ್ತಕವನ್ನು ಕನ್ನಡಕ್ಕೆ ರೂಪಾಂತರ ಮಾಡಿ ಓದುಗರ ಮುಂದಿಟ್ಟಿದ್ದು ಇದು ಅದರ 8ನೆಯ ಆವೃತ್ತಿಯಾಗಿದೆ. ಕುರ್‌ಆನಿನ ಸಂದೇಶವನ್ನು ತಿಳಿಯುವ ಆಸಕ್ತಿಯುಳ್ಳವರಿಗಿದು ಒಂದು ಉತ್ತಮ ಕೊಡುಗೆ ಎಂಬುದರಲ್ಲಿ ಸಂದೇಹವಿಲ್ಲ. ಅಂತೆಯೇ ದೇಶಬಾಂಧವರಿಗೆ ಪವಿತ್ರ ಕುರ್‌ಆನಿನ ಪರಿಚಯ ಮಾಡಿಸುವ ನಿಟ್ಟಿನಲ್ಲಿ ಇದು ಸಹಕಾರಿಯಾಗಲಿ ಎಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

"ಇಸ್ಲಾಮ್ ಧರ್ಮದ ಜ್ಞಾನ ಕರಗತ ಮಾಡಿಕೊಳ್ಳುವುದಕ್ಕೆ ಮುಂಚೆ ನಾನು ಬಹಳಷ್ಟು ಗ್ರಂಥಗಳನ್ನು ಓದಿದ್ದೆ. ಪ್ರಾಚೀನ ಮತ್ತು ಅರ್ವಾಚೀನ ತತ್ವಜ್ಞಾನ, ವಿಜ್ಞಾನ, ಅರ್ಥಶಾಸ್ತ್ರ ರಾಜಕಾರಣ ಇತ್ಯಾದಿ ವಿಷಯಗಳ ಚಿಕ್ಕದೊಂದು ವಾಚನಾಲಯವನ್ನೇ ಮೆದುಳೊಳಗೆ ಇಳಿಸಿದ್ದೆ. ಆದರೆ ಕಣ್ತೆರೆದು ಕುರ್‌ಆನನ್ನು ಓದಿದಾಗ, ದೇವನಾಣೆಗೂ ನಾನು ಓದಿದ್ದೆಲ್ಲವೂ ತುಚ್ಛವೆನಿಸಿತು. ಜ್ಞಾನದಮೂಲ ಈಗ ಕೈ ಸೇರಿದೆ ಎಂಬುದು ನನಗೆ ಆಗ ಮನವರಿಕೆಯಾಯಿತು. ಕ್ಯಾಂಟ್, ಹೈಗಲ್, ನೇಟ್ಸೆ, ಮಾರ್ಕ್ಸ್ ಮತ್ತು ಲೋಕದ ದೊಡ್ಡದೊಡ್ಡ ಎಲ್ಲ ಚಿಂತಕರೂ ಈಗ ನನಗೆ ಹದಿಹರೆಯದ ಮಕ್ಕಳಂತೆ ಕಾಣುತ್ತಿದ್ದಾರೆ. ಆ ಜನರ ಬಗ್ಗೆ ಕನಿಕರ ಹುಟ್ಟುತ್ತದೆ. ಜೀವನದುದ್ದಕ್ಕೂ ಯಾವ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಅವರು ತಲ್ಲೀನರಾಗಿದ್ದರೋ ಯಾವ ಪ್ರಶ್ನೆಗಳ ಬಗ್ಗೆ ದೊಡ್ಡದೊಡ್ಡ ಗ್ರಂಥಗಳನ್ನೇ ಅವರು ರಚಿಸಿಯೂ ಆ ಪ್ರಶ್ನೆಗಳನ್ನು ಅವರಿಂದ ಬಗೆಹರಿಸಲಾಗಲಿಲ್ಲವೋ ಅದನ್ನು ಈ ಗ್ರಂಥವು ಒಂದೆರಡು ವಾಕ್ಯಗಳಲ್ಲಿ ಬಗೆಹರಿಸಿಕೊಟ್ಟಿದೆ. ಅವರು ಈ ಗ್ರಂಥದ ಬಗ್ಗೆ ತಿಳಿದಿರುತ್ತಿದ್ದರೆ, ತಮ್ಮ ಆಯುಷ್ಯವನ್ನು ಈ ರೀತಿ ವ್ಯರ್ಥಗೊಳಿಸುತ್ತಿರಲಿಲ್ಲ. ಈ ಗ್ರಂಥವು ನನ್ನ ನೈಜ ಉಪಕಾರಿಯಾಗಿದೆ. ಇದು ನನ್ನನ್ನು ಪೂರ್ಣ ಬದಲಾಯಿಸಿ ಬಿಟ್ಟಿತು. ಮೃಗದಿಂದ ಮನುಷ್ಯನಾಗಿ ಮಾಡಿತು. ಅಂಧಕಾರ ಗಳಿಂದ ಹೊರತಂದು ಬೆಳಕಿನೆಡೆಗೆ ಸಾಗಿಸಿತು. ಜೀವನದ ಪ್ರತಿಯೊಂದು ವ್ಯವಹಾರದ ಕಡೆಗೆ ದೃಷ್ಟಿ ಹಾಯಿಸಿದಾಗಲೂ ವಾಸ್ತವಿಕತೆ ಯಾವುದೇ ತೆರೆಯಿಲ್ಲದೆ ನನ್ನ ಮುಂದೆ ಪ್ರಕಟವಾಗಿ ತೋರುವಂತೆ ಒಂದು ದೀಪವನ್ನು ನನ್ನ ಕೈಯಲ್ಲಿರಿಸಿಬಿಟ್ಟಿತು. ಎಲ್ಲ ಬೀಗಗಳನ್ನು ತೆರೆಯುವ ಕೀಲಿ ಕೈಯೊಂದಿದೆ. ಅದಕ್ಕೆ ಆಂಗ್ಲ ಭಾಷೆಯಲ್ಲಿ "Master Key" ಎನ್ನುತ್ತಾರೆ. ಈ ಕುರ್‌ಆನ್ ನನಗೆ ಒಂದು "ಮಾಸ್ಟರ್ ಕೀ" ಆಗಿದೆ. ಜೀವನದ ಸಮಸ್ಯೆಗಳ ಯಾವ ಬೀಗಕ್ಕೆ ಇದನ್ನು ಹಚ್ಚಿದರೂ ಅದು ತೆರೆದು ಬಿಡುತ್ತದೆ. ಈ ಗ್ರಂಥವನ್ನು ದಯಪಾಲಿಸಿದ ಅಲ್ಲಾಹನಿಗೆ ಧನ್ಯವಾದ ಅರ್ಪಿಸುವಲ್ಲಿ ನನ್ನ ನಾಲಗೆ ಅಸಮರ್ಥವಾಗಿದೆ.

ಮೌ| ಸಯ್ಯದ್ ಅಬುಲ್ ಆಲಾ ಮೌದೂದಿ

[ವಿಶ್ವ ವಿಖ್ಯಾತ ಕುರ್‌ಆನ್ ವ್ಯಾಖ್ಯಾನಗಾರರು]

1

"ಹೇ ಜನರೇ, ನಿಮ್ಮನ್ನೂ ನಿಮ್ಮ ಪೂರ್ವಿಕರನ್ನೂ ಸೃಷ್ಟಿಸಿದ ನಿಮ್ಮ ಪ್ರಭುವಿನ ದಾಸ್ಯ-ಆರಾಧನೆ ಮಾಡಿರಿ. (ಹೀಗೆ ಮಾಡಿದರೆ) ನೀವು ರಕ್ಷಣೆ ಹೊಂದಬಹುದು. ಅವನೇ ಭೂಮಿಯನ್ನು ನಿಮಗೆ ಹಾಸನ್ನಾಗಿ ಹಾಸಿದನು; ಆಕಾಶದ ಮೇಲ್ಛಾವಣಿ ಮಾಡಿದನು; ಮೇಲ್ಭಾಗದಿಂದ ಮಳೆ ಸುರಿಸಿದನು. ಅದರ ಮೂಲಕ ತರತರದ ಬೆಳೆಗಳನ್ನು ಉತ್ಪಾದಿಸಿ ನಿಮಗೆ ಆಹಾರ ಒದಗಿಸಿದನು. ಇದನ್ನು ನೀವು ಅರಿತಿರುತ್ತ ಇತರರನ್ನು ಅಲ್ಲಾಹನಿಗೆ ಪ್ರತಿಸ್ಪರ್ಧಿಗಳನ್ನಾಗಿ ಮಾಡದಿರಿ." - ಅಲ್‌ಬಕರಃ : 21, 22

ಏಕಮೇವಾದ್ವಿತೀಯ ಒಡೆಯನಾದ ಅಲ್ಲಾಹನೇ ನಿಮ್ಮ ಮತ್ತು ನಿಮ್ಮ ಪೂರ್ವಜರ ಸೃಷ್ಟಿಕರ್ತ ಮತ್ತು ಒಡೆಯ ಎಂಬುದು ನಿಮಗೆ ತಿಳಿದಿದೆ. ಅವನು ಭೂಮಿಯೇ ಹಾಸಿಗೆ, ಆಕಾಶವೇ ಛಾವಣಿಯಾಗಿರುವ ಇಷ್ಟು ವಿಶಾಲವಾದ ಭವ್ಯ ವಿಶ್ವವನ್ನು ನಿಮಗಾಗಿ ಸೃಷ್ಟಿಸಿದನು. ನಿಮ್ಮ ಆಹಾರ ಮತ್ತು ಪೋಷಣೆಗಾಗಿ ಮಳೆಯ ಏರ್ಪಾಟು ಮಾಡಿದನು. ಮಳೆ ಸುರಿದಾಗ ಭೂಮಿಯಲ್ಲಿ ವಿಧವಿಧದ ಫಲಪುಷ್ಪಗಳು, ದವಸ-ಧಾನ್ಯಗಳು, ಹಣ್ಣು-ಹಂಪಲುಗಳು, ಗೆಡ್ಡೆ-ತರಕಾರಿಗಳು ಹುಟ್ಟಿಕೊಳ್ಳುತ್ತವೆ. ನೀವು ಹಗಲಿರುಳು ಅವುಗಳನ್ನು ತಿಂದು ತೃಪ್ತ ರಾಗುತ್ತೀರಿ. ನಿಜ ಹೇಳಿ! ನಿಮ್ಮೊಡೆಯನು ಈ ಎಲ್ಲವನ್ನೂ ಮಾಡುವಾಗ, ಈ ಪೈಕಿ ಯಾವುದಾದರೂ ಕಾರ್ಯದಲ್ಲಿ ಅವನಿಗೆ ಯಾರಾದರೂ ಪಾಲುದಾರರು ಇರುತ್ತಾರೆಯೇ? ಇಲ್ಲ ಎಂದಾದರೆ ನೀವು ಅವನನ್ನು ಆರಾಧಿಸುವ ಪ್ರಶ್ನೆ ಬಂದಾಗ ಅವನ ಜೊತೆ ಇತರರನ್ನೂ ಯಾಕೆ ಅದರಲ್ಲಿ ಸೇರಿಸಿಕೊಳ್ಳುತ್ತೀರಿ?

ಈ ರೀತಿ ನೀವು ಅವನನ್ನು ಬಿಟ್ಟು ಅಥವಾ ಅವನ ಜೊತೆಗೆ ಇತರರನ್ನು ಆರಾಧಿಸುವುದು ನಿಜವಾಗಿ ನಿಮ್ಮ ಜ್ಞಾನ ಮತ್ತು ಅನುಭವಗಳ ಅಕ್ಷಮ್ಯ ಉಲ್ಲಂಘನೆಯಾಗಿದೆ. ಹೀಗೆ ಮಾಡುವುದು ನಿಮ್ಮ ಪಾಲಿಗೆ ಹಾನಿಕಾರಕವಾಗಿದೆ. ಈ ನಿಮ್ಮ ಅವಸ್ಥೆ ಕರುಣಾಜನಕವಾಗಿದೆ. ಸ್ವತಃ ನಿಮ್ಮ ಮೇಲೆ ನೀವು ಕರುಣೆ ತೋರಿ ಈ ಸ್ಥಿತಿಯಿಂದ ಹೊರಬನ್ನಿ. ನಿಮ್ಮ ನೈಜ ಒಡೆಯ ನನ್ನು ಗುರುತಿಸಿ. ನಿಮ್ಮ ಮೇಲೆ ಅವನು ಮಾಡಿರುವ ಅಪಾರ ಉಪಕಾರಗಳನ್ನು ಸ್ಮರಿಸಿರಿ. ಸಂಪೂರ್ಣ ಏಕಾಗ್ರಚಿತ್ತರಾಗಿ ಆ ನಿಮ್ಮ ಒಡೆಯನ ಮೇಲೆ ವಿಶ್ವಾಸವಿಡಿರಿ. ಕೇವಲ ಅವನನ್ನು ಆರಾಧಿಸುವ ಮಾರ್ಗವನ್ನು ಅವಲಂಬಿಸಿರಿ. ಅದರಲ್ಲೇ ನಿಮಗೆ ಹಿತ ಮತ್ತು ಮೋಕ್ಷವಿದೆ.

2

''(ಸಂದೇಶವಾಹಕರೇ, ನನ್ನ ಪರವಾಗಿ) ಹೇಳಿರಿ; ತಮ್ಮ ಮೇಲೆಯೇ ಅತಿರೇಕ ವೆಸಗಿಕೊಂಡಿರುವ ನನ್ನ ದಾಸರೇ, ಅಲ್ಲಾಹನ ಕರುಣೆಯ ಬಗ್ಗೆ ನಿರಾಶರಾಗಬೇಡಿರಿ. ನಿಶ್ಚಯ ವಾಗಿಯೂ ಅಲ್ಲಾಹ್ ಸಕಲ ಪಾಪಗಳನ್ನು ಕ್ಷಮಿಸಿ ಬಿಡುತ್ತಾನೆ. ಅವನಂತು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ. ನಿಮ್ಮ ಪ್ರಭುವಿನೆಡೆಗೆ ಮರಳಿ ಬನ್ನಿರಿ ಮತ್ತು ಅವನ ಶರಣಾಗತ ದಾಸರಾಗಿ ಬಿಡಿರಿ- ನಿಮ್ಮ ಮೇಲೆ ಯಾತನೆ ಎರಗಿಬಿಡುವ ಹಾಗೂ ಮತ್ತೆಲ್ಲಿಂದಲೂ ನಿಮಗೆ ಸಹಾಯ ಸಿಗಲಾರದ ಸ್ಥಿತಿ ಬರುವುದಕ್ಕೆ ಮುಂಚೆ. ಮತ್ತು ನಿಮ್ಮ ಕಡೆಗೆ ನಿಮ್ಮ ಪ್ರಭುವಿನ ಕಡೆಯಿಂದ ಕಳುಹಿಸಲಾಗಿರುವ ಗ್ರಂಥದ ಅತ್ಯುತ್ತಮ ತಾತ್ಪರ್ಯವನ್ನು ಅನುಸರಿಸಿರಿ- ನಿಮಗೆ ಅರಿವೇ ಇಲ್ಲದಂತೆ ನಿಮ್ಮ ಮೇಲೆ ಹಠಾತ್ತನೆ ಯಾತನೆಯು ಬಂದೆರಗು ವುದಕ್ಕೆ ಮುಂಚೆ- ಅನಂತರ ಯಾರಾದರೂ ''ನಾನು ಅಲ್ಲಾಹನ ಮುಂದೆ ಮಾಡುತ್ತಲಿದ್ದ ಅಪರಾಧವು ಖೇದನೀಯ, ನಾನಂತು ಅಪಹಾಸ್ಯ ಮಾಡುವವರ ಸಾಲಿಗೆ ಸೇರಿದ್ದೆನು'' ಎಂದು ಹೇಳುವಂತಾಗದಿರಲಿ- ಅಥವಾ ''ಅಯ್ಯೋ, ಅಲ್ಲಾಹನು ನನಗೆ ಮಾರ್ಗದರ್ಶನ ನೀಡಿರುತ್ತಿದ್ದರೆ ನಾನೂ ದೇವನಿಷ್ಠರಲ್ಲಾಗುತ್ತಿದ್ದೆ'' ಎಂದು- ಅಥವಾ ಯಾತನೆಯನ್ನು ಕಣ್ಣಾರೆ ಕಂಡು, ''ಅಯ್ಯೋ ನನಗೆ ಇನ್ನೊಂದು ಅವಕಾಶ ಸಿಕ್ಕಿ ಬಿಟ್ಟರೆ ನಾನೂ ಸತ್ಕರ್ಮವೆಸಗುವವರಲ್ಲಾಗಿ ಬಿಡುತ್ತಿದ್ದೆ'' ಎಂದು ಹೇಳುವಂತಾಗದಿರಲಿ. (ಆಗ ಅವನಿಗೆ) ''ಏಕೆ? ನನ್ನ ವಚನಗಳು ನಿನ್ನ ಬಳಿಗೆ ಬಂದಿದ್ದುವು. ಅನಂತರ ನೀನು ಅವುಗಳನ್ನು ಸುಳ್ಳಾಗಿಸಿದೆ ಮತ್ತು ದುರಹಂಕಾರ ತೋರಿದೆ, ನೀನು ಸತ್ಯನಿಷೇಧಿಗಳಲ್ಲಾದೆ'' (ಎಂಬ ಉತ್ತರ ಸಿಗುವಂತೆಯೂ ಆಗಬಾರದು). ಇಂದು ಅಲ್ಲಾಹನ ಮೇಲೆ ಸುಳ್ಳಾರೋಪ ಹೊರಿಸಿದವರ ಮುಖವು ಪುನರುತ್ಥಾನ ದಿನ ಕಪ್ಪಾಗಿ ಬಿಟ್ಟಿರುವುದನ್ನು ನೀವು ಕಾಣುವಿರಿ. ದುರಹಂಕಾರಿಗಳಿಗೆ ನರಕದಲ್ಲಿ ಸಾಕಷ್ಟು ಸ್ಥಳವಿಲ್ಲವೇ? ಇದಕ್ಕೆ ವ್ಯತಿರಿಕ್ತವಾಗಿ, ಇಲ್ಲಿ ದೇವಭಯವುಳ್ಳವರಾಗಿದ್ದ ಜನರ ವಿಜಯ ಸಾಧನಗಳ ಕಾರಣ, ಅಲ್ಲಾಹನು ಅವರಿಗೆ ಮೋಕ್ಷ ನೀಡುವನು. ಅಲ್ಲಿ ಅವರಿಗೆ ಯಾವ ಹಾನಿಯೂ ತಟ್ಟದು ಮತ್ತು ಅವರು ದುಃಖಿತರಾಗಲಾರರು.'' - ಅಝ್ಝುಮರ್: 53, 61

ದೇವನ ಅದೆಷ್ಟೋ ದಾಸರು ತಮ್ಮ ಒಡೆಯನನ್ನು ಮರೆತಿದ್ದಾರೆ. ದಾರಿಗೆಟ್ಟು ಅಲೆಯುತ್ತಿದ್ದಾರೆ. ತಮ್ಮನ್ನು ತಮ್ಮ ಅಂಧ ಅಪೇಕ್ಷೆಗಳ ವಶಕ್ಕೊಪ್ಪಿಸಿ ಸ್ವೇಚ್ಛೆಗಳ ಬೆನ್ನಟ್ಟಿ ಓಡುತ್ತಿದ್ದಾರೆ. ಒಡೆಯನ ವತಿಯಿಂದ ಬಂದ ಆದೇಶಗಳನ್ನು ನಿರ್ಲಕ್ಷಿಸಿ, ಅವನ ಆಜ್ಞೆ ಗಳನ್ನು ಉಲ್ಲಂಘಿಸುತ್ತಾ ಬದುಕುತ್ತಿದ್ದಾರೆ. ಈ ಮೂಲಕ ಅವರು ತಮ್ಮ ಈ ಲೌಕಿಕ ಬದುಕಿನ ಸಂಕ್ಷಿಪ್ತ ಅವಧಿಯನ್ನು ಪಾಪ ಮತ್ತು ವಿದ್ರೋಹದಲ್ಲಿ ಬಹಳ ನಿಷ್ಕರುಣವಾಗಿ ವ್ಯಯಿಸುತ್ತಿದ್ದಾರೆ. ಆದರೆ ಒಂದು ದಿನ ಈ ಜೀವನಾವಧಿ ಹಠಾತ್ತನೆ ಕೊನೆಗೊಳ್ಳುವುದು. ಆಗ ಇಂಥ ಜನರು ಅತ್ಯಂತ ಯಾತನಾಮಯ ಶಿಕ್ಷೆಗೆ ಗುರಿಯಾಗುವರು.

ಅವರ ಈ ಸ್ಥಿತಿ ಎಷ್ಟು ಕರುಣಾಜನಕ! ಆದರೆ ಅವರ ಮೇಲೆ ಅವರ ಒಡೆಯನ ಹೊರತು ಇನ್ನಾರು ಕರುಣೆ ತೋರುವರು? ಅವರ ಇಹಲೋಕ ಮತ್ತು ಪರಲೋಕದ ಎರಡೂ ಜೀವನಗಳನ್ನು ಸಮಾನವಾಗಿ ಬಲ್ಲವನು, ಅವರನ್ನು ಸೃಷ್ಟಿಸಿದವನು, ಪೋಷಿಸಿದವನು ಮತ್ತು ಅವರ ಹಿರಿಯ-ಕಿರಿಯ ಅಗತ್ಯಗಳನ್ನೆಲ್ಲಾ ಪೂರೈಸಿದವನು ಆ ಒಡೆಯನೇ ಅಲ್ಲವೇ? ಆದ್ದರಿಂದ ಅವನೇ ಅವರ ಅವಸ್ಥೆಯ ಬಗ್ಗೆ ಕರುಣೆ ತೋರಬಲ್ಲನು.

ಇಲ್ಲಿ ಅವರ ಒಡೆಯನು ಎಷ್ಟೊಂದು ವಾತ್ಸಲ್ಯಭರಿತ ಧ್ವನಿಯಲ್ಲಿ ಅವರನ್ನು ತನ್ನತ್ತ ಆಹ್ವಾನಿಸಿದ್ದಾನೆಂಬುದನ್ನು ಗಮನಿಸಿ. ನೀವು ಮಹಾಮಹಾ ಅಪರಾಧಗಳನ್ನು ಮಾಡಿದ್ದೀರಿ, ದೊಡ್ಡದೊಡ್ಡ ತಪ್ಪುಗಳು ನಿಮ್ಮಿಂದ ಸಂಭವಿಸಿವೆ. ಆದರೆ ಅದೇ ಕಾರಣಕ್ಕಾಗಿ ನೀವು ನಿರಾಶರಾಗಿ, ಹತಾಶರಾಗಿ ಬದುಕಿನ ಇನ್ನುಳಿದ ದಿನಗಳನ್ನೂ ಅವನಿಂದ ದೂರವಿದ್ದು ಕಳೆಯುವಿರಾ? ಬೇಡ! ಖಂಡಿತ ಹಾಗೆ ಮಾಡಬೇಡಿ. ನನ್ನ ದಾಸರೇ! ನೀವು ಅಲ್ಲಾಹನ ಅನುಗ್ರಹದ ಬಗ್ಗೆ ನಿರಾಶರಾಗಬೇಡಿ. ಅಲ್ಲಾಹನು ನಿಮ್ಮ ಎಲ್ಲ ಪಾಪಗಳನ್ನೂ ಕ್ಷಮಿಸುವನು. ಅವನು ಅತ್ಯಂತ ಕ್ಷಮಾಶೀಲನೂ ದಯಾಳುವೂ ಆಗಿದ್ದಾನೆ. ವಾತ್ಸಲ್ಯಮಯಿ ತಾಯಿ ತನ್ನ ಹಾಲುಣ್ಣುವ ಮಗುವನ್ನು ಕಾದಂತೆ ಅವನ ಕ್ಷಮೆ ಅನುಗ್ರಹಗಳು ನಿಮಗಾಗಿ ಕಾಯುತ್ತಿವೆ. ನೀವು ನಿಮ್ಮೊಡೆಯನಿಂದ ದೂರ ಇರುವ ತನಕ ನಿಮ್ಮಿಂದ ಇಂಥ ಪಾಪಗಳು ಸಂಭವಿಸುತ್ತಲೇ ಇರುವುವು. ನಿಮಗೆ ಸಿಕ್ಕಿರುವ ಈ ಸಂಕ್ಷಿಪ್ತ ಜೀವನಾವಧಿ ಇನ್ನೊಮ್ಮೆ ಸಿಗಲಾರದು. ಇದನ್ನು ನಿರ್ಲಕ್ಷಿಸಿದರೆ ನೀವು ಮಾಡಿದ ಪಾಪಗಳನ್ನು ಪರಿಹರಿಸಿಕೊಳ್ಳುವ ಅವಕಾಶವೂ ಸಿಗದೆ ಜೀವನ ಕಳೆದು ಹೋಗಬಹುದು.

ಆದ್ದರಿಂದ ನನ್ನ ದಾಸರೇ! ಈ ಅವಧಿ ಮುಗಿದು ಆ ಭಯಾನಕ ಶಿಕ್ಷೆಯು ಬಂದೆರಗಿ ನೀವು ನನ್ನ ಅನುಗ್ರಹದಿಂದ ಶಾಶ್ವತವಾಗಿ ವಂಚಿತರಾಗಿ ಬಿಡುವುದಕ್ಕಿಂತ ಮುನ್ನ ನನ್ನತ್ತ ಮರಳಿ ಬನ್ನಿರಿ. ನಿಮ್ಮನ್ನು ನಿಮ್ಮೊಡೆಯನ ವಶಕ್ಕೆ ಅರ್ಪಿಸಿಕೊಳ್ಳಿರಿ. ಸ್ವೇಚ್ಛೆಗಳ ಬೆನ್ನಟ್ಟುವುದನ್ನು ನಿಲ್ಲಿಸಿರಿ. ಇಲ್ಲವಾದರೆ ನೀವು ನಾಶವಾಗುವಿರಿ.

ನಿಮ್ಮೊಡೆಯನ ಮೆಚ್ಚುಗೆ ಮತ್ತು ಸಂಪ್ರೀತಿ ಗಳಿಸುವುದೇ ನಿಮ್ಮ ಅತ್ಯುಚ್ಛ ಧ್ಯೇಯವಾಗಲಿ. ಅದರಲ್ಲೇ ನಿಮ್ಮ ಗೆಲುವಿದೆ. ನಿಮ್ಮೊಡೆಯನು ನಿಮಗಾಗಿ ಅತ್ಯುತ್ತಮ ಬೋಧನೆಗಳನ್ನು ಅವತರಿಸಿರುವನು. ನಿಮಗರಿವಿಲ್ಲದಂತೆ ಹಠಾತ್ತನೆ ನಿಮ್ಮ ಮೇಲೆ ಆ ಭಯಂಕರ ಶಿಕ್ಷೆ ಎರಗಿ ಬಿಡುವುದಕ್ಕೆ ಮುನ್ನವೇ ಈ ಬೋಧನೆಗಳನ್ನು ಅನುಸರಿಸಿರಿ. ನೀವು ಇದನ್ನು ವಿಳಂಬಿಸಿದರೆ ಈ ಜೀವನಾವಧಿ ಮುಗಿದುಬಿಟ್ಟೀತು. ಒಮ್ಮಿಂದೊಮ್ಮೆಗೇ ದೇವ ಯಾತನೆ ಎದುರಾದಾಗ ಕೈ ಕೈ ಹೊಸಕಿಕೊಂಡು, ಅಯ್ಯಯ್ಯೋ! ಅಲ್ಲಾಹನ ವಿಷಯದಲ್ಲಿ ನನ್ನಿಂದ ಅದೆಷ್ಟು ದೊಡ್ಡ ಪ್ರಮಾದ ಆಗಿಬಿಟ್ಟಿತು. ನಾನು ಅವನ ವಿಷಯವನ್ನು ಗಂಭೀರವಾಗಿ ಪರಿಗಣಿಸಿಯೇ ಇರಲಿಲ್ಲವಲ್ಲಾ, ಅಲ್ಲಾಹನು ನನಗೆ ಮಾರ್ಗದರ್ಶನ ಮಾಡಿದ್ದರೆ ನಾನೂ ದೇವಭಕ್ತನಾಗಿ, ಸತ್ಯಸಂಧನಾಗಿ ಬದುಕುತ್ತಿದ್ದೆ ಎಂದು ಪರಿತಪಿಸಬೇಕಾದೀತು. ಹಾಗೆಯೇ ಘೋರ ಶಿಕ್ಷೆ ಎದುರಾದಾಗ, ಅಯ್ಯೋ ನನಗೆ ಇನ್ನೊಮ್ಮೆ ಭೂಮಿಗೆ ಮರಳಿಹೋಗಲು ಬಿಟ್ಟರೆ ನಾನು ಖಂಡಿತವಾಗಿಯೂ ಸಜ್ಜನನಾಗಿ ಬಾಳುವೆ ಎಂದು ತೊಳಲಾಡಬೇಕಾದೀತು.

ನನ್ನ ದಾಸರೇ! ಇಂದು ನೀವು ಈ ರೀತಿ ನನ್ನ ಆದೇಶಗಳನ್ನು ತಿರಸ್ಕರಿಸಿ, ಅಹಂಕಾರ ತೋರುತ್ತಾ ನಿರಾಕರಿಸಿದರೆ ಆ ದಿನ ನೀವು ಕೊರಗುತ್ತಾ ತೊಳಲಾಡುತ್ತಾ ಇರುವಾಗ, "ನೋಡಿ, ನಿಮ್ಮ ಬಳಿಗೆ ನನ್ನ ಅಪ್ಪಣೆಗಳು ಬಂದಿದ್ದುವು. ಆದರೆ ನೀವು ಅವುಗಳನ್ನು ತಿರಸ್ಕರಿಸಿದಿರಿ, ಅಹಂಕಾರ ತೋರಿಸಿದಿರಿ ಮತ್ತು ನಿರಾಕರಿಸಿದಿರಿ. ಅಲ್ಲಾಹನ ಮೇಲೆ ಸುಳ್ಳಾರೋಪ ಹೊರಿಸುವವರ ಮುಖವು ಆ ನಿರ್ಣಾಯದ ದಿನ ಕಪ್ಪಾಗಿ ಬಿಡುವುದು. ಅಂಥವರ ನೆಲೆ ನರಕವೇ ಆಗಿದೆ" ಎಂದು ನಿಮ್ಮೊಡನೆ ಸ್ಪಷ್ಟವಾಗಿ ಹೇಳಲಾಗುವುದು.

ಇದಕ್ಕೆ ತದ್ವಿರುದ್ಧವಾಗಿ ಅಲ್ಲಾಹನ ಆಜ್ಞೆಗಳನ್ನು ಉಲ್ಲಂಘಿಸದೆ, ಅವನಿಚ್ಛೆಯಂತೆ ಬದುಕಿದ ಜನರಿಗೆ ಅಂದು ಅಲ್ಲಾಹನು ವಿಜಯವನ್ನೂ ಮೋಕ್ಷವನ್ನೂ ದಯಪಾಲಿಸುವನು. ಆ ದಿನ ಅವರಿಗೆ ಯಾವುದೇ ದುಃಖವಾಗಲೀ ಸಂಕಟವಾಗಲೀ ಇರಲಾರದು.

3

"ನಾವು ನಿಮ್ಮನ್ನು ಸೃಷ್ಟಿಸಿದೆವು. ಆದರೂ ನೀವು ದೃಢೀಕರಿಸುವುದಿಲ್ಲವೇಕೆ? ನೀವು ಸುರಿಸುವ ವೀರ್ಯದ ಕುರಿತು ನೀವೆಂದಾದರೂ ವಿವೇಚಿಸಿರುವಿರಾ? ಅದರಿಂದ ಶಿಶುವನ್ನು ಉಂಟು ಮಾಡುವವರು ನೀವೋ ಅಥವಾ ಅದನ್ನುಂಟು ಮಾಡುವವರು ನಾವೋ? ನಾವು ನಿಮ್ಮೊಳಗೆ ಮರಣವನ್ನು ಹಂಚಿರುತ್ತೇವೆ. ನಿಮ್ಮ ರೂಪಗಳನ್ನು ಬದಲಾಯಿಸಿ ಬಿಡಲಿಕ್ಕೂ ನಿಮಗೆ ತಿಳಿದಿರದ ಯಾವುದಾದರೂ ರೂಪದಲ್ಲಿ ನಿಮ್ಮನ್ನು ಸೃಷ್ಟಿಸಲಿಕ್ಕೂ ನಾವು ಅಶಕ್ತರಲ್ಲ. ನಿಮ್ಮ ಪ್ರಥಮ ಜನನದ ಕುರಿತಂತೂ ನಿಮಗೆ ತಿಳಿದೇ ಇದೆ. ಮತ್ತೇಕೆ ಪಾಠ ಕಲಿಯು ವುದಿಲ್ಲ? ನೀವು ಬಿತ್ತುವ ಬೀಜದ ಕುರಿತು ನೀವೆಂದಾದರೂ ವಿವೇಚಿಸಿದಿರಾ? ಅವುಗಳಿಂದ ಬೆಳೆಯನ್ನು ಬೆಳೆಸುವವರು ನೀವೋ ಅಥವಾ ಅದನ್ನು ಬೆಳೆಸುವವರು ನಾವೋ? ನಾವಿಚ್ಛಿಸಿದರೆ ಆ ಹೊಲಗಳನ್ನು ಹೊಟ್ಟನ್ನಾಗಿ ಮಾಡಿಬಿಡಬಲ್ಲೆವು. ಆಗ ನೀವು- ತರತರದ ಮಾತುಗಳ ನ್ನಾಡುತ್ತಲೇ ಇರುವಿರಿ- ಎಲ್ಲವೂ ನಮ್ಮ ಮೇಲೆ ತಿರುಗಿ ಬಿತ್ತು. ನಿಜವಾಗಿ ನಮ್ಮ ಭಾಗ್ಯವೇ ಹಾಳು. ನೀವು ಕುಡಿಯುವ ನೀರಿನ ಬಗ್ಗೆ ಎಂದಾದರೂ ವಿವೇಚಿಸಿದ್ದುಂಟೇ? ಅದನ್ನು ಮೋಡಗಳಿಂದ ಸುರಿಸಿದವರು ನೀವೋ ಅಥವಾ ಅದನ್ನು ಸುರಿಸಿದವರು ನಾವೋ? ನಾವಿಚ್ಛಿಸಿದರೆ ಅದನ್ನು ಕಡು ಉಪ್ಪನ್ನಾಗಿ ಮಾಡಿ ಬಿಡಬಲ್ಲೆವು. ಹೀಗಿರುತ್ತ ನೀವೇಕೆ ಕೃತಜ್ಞ ರಾಗುವುದಿಲ್ಲ? ನೀವು ಉರಿಸುತ್ತಿರುವ ಬೆಂಕಿಯ ಕುರಿತು ನೀವೆಂದಾದರೂ ವಿವೇಚನೆ ನಡೆಸಿ ದ್ದುಂಟೇ? ಅದರ ಮರವನ್ನು ಉಂಟು ಮಾಡಿದವರು ನೀವೋ ಅಥವಾ ಅದನ್ನುಂಟು ಮಾಡಿದವರು ನಾವೋ? ನಾವು ಅದನ್ನು ಸ್ಮರಣ ಸಾಧನವಾಗಿಯೂ ಅಗತ್ಯವುಳ್ಳವರಿಗೆ ಜೀವನ ಸಾಧನವಾಗಿಯೂ ಮಾಡಿರುತ್ತೇವೆ. ಆದುದರಿಂದ ಸಂದೇಶವಾಹಕರೇ, ಅತ್ಯಂತ ಮಹಾನನಾದ ನಿಮ್ಮ ಪ್ರಭುವಿನ ನಾಮವನ್ನು ಕೊಂಡಾಡಿರಿ."

- ಅಲ್ ವಾಕಿಅಃ: 57, 74

ನಾವು ಸಾಮಾನ್ಯವಾಗಿ ನಮ್ಮ ಜನನ ಮತ್ತು ಬೆಳವಣಿಗೆಯ ಬಗ್ಗೆ ಹೆಚ್ಚು ಚಿಂತಿಸುವುದಿಲ್ಲ. ನಿಜವಾಗಿ ಇವು ಪ್ರತಿಕ್ಷಣ ನಮ್ಮ ಕಣ್ಮುಂದೆಯೇ ಇರುವ ಬಹಳ ಪ್ರಧಾನ ವಾಸ್ತವಗಳಾಗಿವೆ. ನಾವು ಬೇರೇನನ್ನು ಮರೆತರೂ ಇವುಗಳನ್ನು ಮರೆಯಲು ಸಾಧ್ಯವೇ ಇಲ್ಲ. ನಾವು ಸೃಷ್ಟಿಸಲ್ಪಟ್ಟವರು ಮತ್ತು ಪೋಷಿಸಲ್ಪಡುತ್ತಿರುವವರು ಎಂಬುದು ಒಂದು ನಗ್ನ ಸತ್ಯ. ಅದನ್ನು ಯಾರೂ ನಿರಾಕರಿಸುವಂತಿಲ್ಲ. ಅಲ್ಲದೆ ನಮ್ಮ ಅಸ್ತಿತ್ವದ ಪ್ರಜ್ಞೆಯೂ ನಮ್ಮಲ್ಲಿ ಖಂಡಿತ ಇರುತ್ತದೆ. ಅದಕ್ಕೆ ನಮಗೆ ಯಾವುದೇ ಸಾಕ್ಷ್ಯ- ಪುರಾವೆಗಳ ಅಗತ್ಯವಿಲ್ಲ. ಆದರೂ ದುರದೃಷ್ಟವಶಾತ್, ಒಂದು ವಸ್ತು ಎಷ್ಟು ಹೆಚ್ಚು ಉಜ್ವಲವಾಗಿದೆಯೋ ನಾವದನ್ನು ಅಷ್ಟೇ ಹೆಚ್ಚು ನಿರ್ಲಕ್ಷಿಸುತ್ತೇವೆ. ಇಲ್ಲಿ ದೇವನು ನಿರ್ಲಕ್ಷ್ಯ ಮತ್ತು ಅಸಡ್ಡೆಯ ಈ ಪೊರೆಯನ್ನು ಕಿತ್ತೆಸೆದು ನಮಗೆ "ನಾವು ಸೃಷ್ಟಿಸಲ್ಪಟ್ಟವರು ಮತ್ತು ಪೋಷಿತರು" ಎಂಬ ಪ್ರಜ್ಞೆ ಮೂಡಿಸುವ ಬೆಳಕನ್ನು ದಯಪಾಲಿಸಿದ್ದಾನೆ. ಈ ಪ್ರಜ್ಞೆ ನಮ್ಮಲ್ಲಿ ನಮ್ಮ ಸೃಷ್ಟಿಕರ್ತ ಮತ್ತು ಪೋಷಕನ ಕುರಿತಾದ ಪ್ರಜ್ಞೆಯನ್ನು ಅದು ಎಂದೂ ಮಂದವಾಗದಷ್ಟು ಉಜ್ವಲವಾಗಿ ಬೆಳಗಿಸುತ್ತದೆ. ಇಲ್ಲಿ ನಮ್ಮೊಡೆಯನು ನಾವು ನಿತ್ಯ ಕಾಣುವ ಹಾಗೂ ನಿತ್ಯ ಬಳಸುವ ಅವನ ಹಲವಾರು ಕೊಡುಗೆಗಳನ್ನು ಪ್ರಸ್ತಾಪಿಸಿ ಅವುಗಳಲ್ಲಿರುವ ಎರಡು ಪ್ರಮುಖ ಲಾಭಗಳನ್ನು ತಿಳಿಸಿದ್ದಾನೆ. ಮೊದಲನೆಯದಾಗಿ ಅವೆಲ್ಲಾ ನಮ್ಮ ಮಟ್ಟಿಗೆ ಪಾಠ ಹಾಗೂ ನೆನಪಿಸುವ ಸಾಧನಗಳಾಗಿ. ಎರಡನೆಯದಾಗಿ ಅವನ್ನೆಲ್ಲಾ ನಾವು ಬಳಸಬಹುದಾಗಿದೆ. ಎರಡನೆಯ ಪ್ರಯೋಜನವನ್ನಂತೂ ನಾವು ಧಾರಾಳವಾಗಿ ಪಡೆದುಕೊಳ್ಳುತ್ತೇವೆ. ಆದರೆ ಮೊದಲನೆಯದನ್ನು ನಿರ್ಲಕ್ಷಿಸುತ್ತೇವೆ. ಅದುವೇ ನಮ್ಮ ಬಹುದೊಡ್ಡ ಪ್ರಮಾದ. ಇಲ್ಲಿ ದೇವನು ವಿವಿಧ ಪ್ರಶ್ನೆಗಳನ್ನು ಕೇಳುವ ಮೂಲಕ ನಮ್ಮ ಅಂತಃ ಪ್ರಜ್ಞೆಯನ್ನು ಬಡಿದೆಬ್ಬಿಸಿದ್ದಾನೆ.

ನಿಮ್ಮನ್ನು ಸೃಷ್ಟಿಸಿರುವವರು ನಾವು (ದೇವನು). ನೀವು ಅದನ್ನು ಅಂಗೀಕರಿಸುವುದಿಲ್ಲವೇಕೆ? ನೀವು ಸೃಷ್ಟಿಸಲ್ಪಟ್ಟವರೆಂಬ ಪ್ರಜ್ಞೆ ನಿಮಗಿಲ್ಲವೇ? ಅಥವಾ ನಮ್ಮ ಹೊರತು ಇನ್ನಾರಾದರೂ ನಿಮ್ಮನ್ನು, ಸೃಷ್ಟಿಸಿದ್ದು ತಾವೆಂದು ವಾದಿಸಿ, ಅದರಿಂದಾಗಿ ನಿಮಗೆ ಗೊಂದಲವಾಗಿದೆಯೇ? ಹಾಗಲ್ಲವಾದರೆ ನೀವು ಈ ಸತ್ಯವನ್ನು ನಿರಾಕರಿಸುವುದೇಕೆ?

ಸ್ವತಃ ನಿಮ್ಮ ಸೃಷ್ಟಿಯ ಬಗ್ಗೆ ಸ್ವಲ್ಪ ಚಿಂತಿಸಿ ನೋಡಿ. ಕೇವಲ ಒಂದು ಬಿಂದು ವೀರ್ಯದಿಂದ ಇಂಥಾ ಅದ್ಭುತ, ಜೀವಂತ ಶರೀರ ನಿರ್ಮಿಸುವುದರಲ್ಲಿ ನಿಮ್ಮ ಪಾತ್ರ ಎಷ್ಟಿದೆ? ನಿಜ ಹೇಳಿ. ವೀರ್ಯದಿಂದ ಮಾನವನ ರಚನೆ ಮಾಡುವವರು ನೀವೋ, ನಾವೋ? ನಿಮಗೆಲ್ಲಾ ಮರಣವನ್ನು ವಿಧಿಸುವ ನಾವು ನಿಮ್ಮ ಸ್ಥಾನದಲ್ಲಿ ಇತರ ಯಾರನ್ನೋ ತಂದು ನೆಲೆಸಿ, ನಿಮಗೆ ಏನೇನೂ ತಿಳಿಯದಂತಹ ಒಂದು ಸ್ಥಿತಿಯಲ್ಲಿ ನಿಮ್ಮನ್ನು ಮತ್ತೆ ಜೀವಂತಗೊಳಿಸುವ ಸಾಮರ್ಥ್ಯ ಪಡೆದಿದ್ದೇವೆ. ಒಮ್ಮೆ ನೀವು ಹುಟ್ಟಿರುವುದು ನಿಮಗೆ ತಿಳಿದಿದೆ. ಅದರಲ್ಲೇ ನಿಮಗೆ ಇನ್ನೊಮ್ಮೆ (ಪರಲೋಕದಲ್ಲಿ) ನಿಮ್ಮನ್ನು ಜೀವಂತಗೊಳಿಸಲು ಸಾಧ್ಯವಿದೆಯೆಂಬ ಪಾಠ ಸಿಗುವುದಿಲ್ಲವೇ?

ನಮ್ಮ (ದೇವನ) ಸಾಮರ್ಥ್ಯವನ್ನಂತೂ ನೀವು ನಿತ್ಯ ನೋಡುತ್ತಲೇ ಇರುತ್ತೀರಿ. ನಿಮ್ಮ ಹೊಲ ಮತ್ತು ತೋಟಗಳ ಬಗ್ಗೆ ಸ್ವಲ್ಪ ಚಿಂತಿಸಿ ನೋಡಿ. ನೀವು ಬಿತ್ತುವ ಆ

ಬೀಜಕ್ಕೆ ಚಿಗುರು ಕೊಡುವವರು ಯಾರು? ಮಣ್ಣು ಮತ್ತು ಗೊಬ್ಬರದ ಅಡಿಯಲ್ಲಿ ಸುಪ್ತವಾಗಿರುವ ಆ ಬೀಜದಿಂದ ನಳನಳಿಸುವ ಸಂಪದ್ಭರಿತ ಪೈರು ಬೆಳೆಸುವವರು ಯಾರು? ನಾವೋ ನೀವೋ? ನಾವಿಚ್ಛಿಸಿದರೆ ಆ ಬೆಳೆಯನ್ನೆಲ್ಲಾ ಭಸ್ಮಗೊಳಿಸಿ, ನೀವು "ಅಯ್ಯೋ ಎಲ್ಲಾ ನಾಶವಾಗಿ ಹೋಯಿತು, ನಾವು ನಿರ್ಗತಿಕರಾದೆವು" ಎಂದು ರೋದಿಸುವಂತೆ ಮಾಡಬಹುದು. ಹಾಗೆ ಮಾಡಲು ನಮಗಿರುವ ಸಾಮರ್ಥ್ಯವನ್ನು ನೀವು ನಿರಾಕರಿಸುವಿರಾ? ನೀವು ನಿಮ್ಮ ದಾಹ ತಣಿಸಲು ಕುಡಿಯುವ ನೀರಿನ ಬಗ್ಗೆ ತುಸು ಆಲೋಚಿಸಿ. ಅದನ್ನು ಮೋಡದಿಂದ ಮಳೆಯ ರೂಪದಲ್ಲಿ ಇಳಿಸುವವರು ನೀವೋ ಅಥವಾ ನಾವೋ? ನಾವಿಚ್ಛಿಸಿದರೆ ಮಳೆಯ ನೀರನ್ನು ಉಪ್ಪಾಗಿಸಿ, ನಿಮಗೆ ಕುಡಿಯಲಾಗದಂತೆ ಮಾಡಲು ಸಾಧ್ಯವಿಲ್ಲವೇ? ಹಾಗಿರುವಾಗ ನೀವು ನಮಗೆ ಕೃತಜ್ಞತೆ ಸಲ್ಲಿಸುವುದಿಲ್ಲವೇಕೆ?

ನೀವು ಅಡಿಗೆಗಾಗಿ ಉರಿಸುವ ಬೆಂಕಿಯನ್ನು ಗಮನಿಸಿ. ಅದಕ್ಕೆ ಬೇಕಾದ ಉರುವಲನ್ನು ಸೃಷ್ಟಿಸಿದವರು ಯಾರು? ನೀವೋ ನಾವೋ? ಈ ಎಲ್ಲ ವಸ್ತುಗಳಿಂದ ನಿಮಗೆ ಎರಡು ಲಾಭಗಳಿವೆ. ಮೊದಲನೆಯದಾಗಿ, ಇವುಗಳಿಂದ ನಿಮಗೆ ದೇವನ ಅಸ್ತಿತ್ವ ಮತ್ತು ಅವನ ಮಹಿಮೆಯನ್ನೂ ಗುರುತಿಸಲು ಸಾಧ್ಯವಾಗುತ್ತದೆ. ಎರಡನೆಯದಾಗಿ ಅವೆಲ್ಲವೂ ನಿಮಗೆ ನಿತ್ಯ ಉಪಯುಕ್ತವಾಗಿವೆ. ನಿಮ್ಮ ಪಾಲನೆ ಪೋಷಣೆಗಾಗಿ ನಾವು ಜಗತ್ತಿನಲ್ಲಿ ಸೃಷ್ಟಿಸಿರುವ ಅಪಾರ ವಸ್ತುಗಳಿಂದ ನೀವು ಈ ಲಾಭಗಳನ್ನು ಪಡೆಯಬಹುದು. ನೀವು ಆ ಎರಡೂ ಲಾಭಗಳನ್ನು ಅನುಭವಿಸಿರಿ. ನಿಮ್ಮ ಒಡೆಯನನ್ನು ಎಂದೂ ಮರೆಯಬೇಡಿ. ಆ ಮಹಾಮಹಿಮ, ಸರ್ವಶ್ರೇಷ್ಠ, ಸರ್ವಶಕ್ತನ ನಾಮವನ್ನು ಕೊಂಡಾಡಿರಿ.

ಈ ರೀತಿ ನಾವು ನಮ್ಮ ಒಡೆಯನ ಮಾರ್ಗದರ್ಶನದಂತೆ ಸ್ವತಃ ನಮ್ಮ ಅಸ್ತಿತ್ವದ ಬಗ್ಗೆ ಮತ್ತು ನಮ್ಮ ಸುತ್ತಮುತ್ತಲ ಹಾಗೂ ನಿತ್ಯ ಬಳಕೆಯ ವಸ್ತುಗಳ ಬಗ್ಗೆ ಚಿಂತನೆ ಮಾಡಿದರೆ ನಮ್ಮ ಅಂತಃದೃಷ್ಟಿಯು ತೆರೆದುಕೊಳ್ಳಬಹುದು ಮತ್ತು ಅದರಿಂದಾಗಿ ನಮ್ಮಲ್ಲಿ ಸ್ವತಃ ನಮ್ಮ ಅಸ್ತಿತ್ವದ ಬಗ್ಗೆ ಇರುವಷ್ಟೇ ಪ್ರಜ್ಞೆ ದೇವನ ಅಸ್ತಿತ್ವದ ಬಗ್ಗೆಯೂ ಉಂಟಾಗಬಹುದು ಮತ್ತು ಆ ಪ್ರಜ್ಞೆ ಒಂದು ಕ್ಷಣವೂ ದೂರವಾಗದೆ ನಿರಂತರವಾಗಿ ನಮ್ಮ ಜೊತೆಗಿದ್ದು "ನಾವಿದೋ ವಿಶ್ವಾಸವಿಟ್ಟೆವು" ಎಂದು ಉದ್ಗರಿಸಲು ಪ್ರೇರಕವಾಗಬಹುದು.

4

"ಅಲ್ಲಾಹನ ಮೇಲೆ ಸುಳ್ಳಾರೋಪ ಹೊರಿಸುವವನಿಗಿಂತ ಅಥವಾ ತನ್ನ ಮೇಲೆ ಯಾವುದೇ 'ದಿವ್ಯವಾಣಿ' ಅವತೀರ್ಣವಾಗಿರದಿದ್ದರೂ ನನಗೆ 'ದಿವ್ಯವಾಣಿ' ಬಂದಿದೆಯೆನ್ನುವವನಿಗಿಂತ ಅಥವಾ ಅಲ್ಲಾಹನು ಅವತೀರ್ಣಗೊಳಿಸಿರುವುದಕ್ಕೆ ವಿರುದ್ಧವಾಗಿ ನಾನೂ ಇಂತಹದನ್ನು ಅವತೀರ್ಣಗೊಳಿಸಿ ತೋರಿಸಿ ಬಿಡುವೆನೆನ್ನುವವನಿಗಿಂತ ಹಿರಿಯ ಅಕ್ರಮಿ

ಇನ್ನಾರಿದ್ದಾನೆ? ಅಕಟ! ನೀವು ಅಕ್ರಮಿಗಳನ್ನು, ಅವರು ಮರಣ ಸಂಕಟದಲ್ಲಿ ಮುಳುಗೇಳುತ್ತಿರುವ ಮತ್ತು ದೇವಚರರು ಕೈ ಚಾಚುತ್ತ, "ತನ್ನಿರಿ, ನಿಮ್ಮ ಪ್ರಾಣವನ್ನು ಹೊರ ತೆಗೆಯಿರಿ. ನೀವು ಅಲ್ಲಾಹನ ಮೇಲೆ ಸುಳ್ಳಾರೋಪ ಹೊರಿಸಿ ವೃಥಾ ಒದರುತ್ತಿದ್ದುದರ ಹಾಗೂ ಅವನ ನಿದರ್ಶನಗಳ ವಿರುದ್ಧ ಉದ್ಧಟತನ ತೋರುತ್ತಿದ್ದುದರ ಫಲವಾಗಿ ಇಂದು ನಿಮಗೆ ಅಪಮಾನಕರ ಶಿಕ್ಷೆ ನೀಡಲಾಗುವುದು" ಎಂದು ಹೇಳುತ್ತಿರುವ ಸ್ಥಿತಿಯಲ್ಲಿ ನೋಡಲು ಶಕ್ತರಾಗುತ್ತಿದ್ದರೆ! (ಅಲ್ಲಾಹನು ಅಂದು ಹೀಗೆ ಹೇಳುವನು:) ಇದೋ ನಾವು ನಿಮ್ಮನ್ನು ಪ್ರಥಮ ಬಾರಿ ಒಬ್ಬಂಟಿಗರನ್ನಾಗಿ ಸೃಷ್ಟಿಸಿದಂತೆಯೇ ನೀವೀಗ ಒಬ್ಬಂಟಿಗರಾಗಿ ನಮ್ಮ ಮುಂದೆ ಹಾಜರಾಗಿಬಿಟ್ಟಿರಿ. ನಾವು ನಿಮಗೆ ಇಹಲೋಕದಲ್ಲಿ ಕೊಟ್ಟಿದ್ದುದನ್ನೆಲ್ಲ ನೀವು ಬಿಟ್ಟು ಬಂದಿರಿ. ಈಗ ನಿಮ್ಮೊಂದಿಗೆ ನಿಮ್ಮ ಕಾರ್ಯನಿರ್ವಹಣೆಯಲ್ಲಿ ಯಾರ ಪಾಲಿದೆಯೆಂದು ನೀವು ತಿಳಿದುಕೊಂಡಿದ್ದೀರೋ ಆ ನಿಮ್ಮ ಶಿಫಾರಸುದಾರರನ್ನು ನಾವು ಇಲ್ಲಿ ಕಾಣುತ್ತಿಲ್ಲ. ನಿಮ್ಮ ಪರಸ್ಪರ ಸಂಬಂಧಗಳು ಮುರಿದು ಹೋದವು. ನೀವು ಅಭಿಮಾನವಿರಿಸಿಕೊಂಡಿದ್ದವರೆಲ್ಲರೂ ನಿಮ್ಮಿಂದ ಮಾಯವಾಗಿಬಿಟ್ಟರು. ಕಾಳು ಮತ್ತು ಗೊರಟನ್ನು ಸೀಳುವವನು ಅಲ್ಲಾಹ್. ಅವನೇ ಸಜೀವಿಯನ್ನು ನಿರ್ಜೀವಿಯಿಂದ ಹೊರತೆಗೆಯುತ್ತಾನೆ ಮತ್ತು ನಿರ್ಜೀವಿಯನ್ನು ಸಜೀವಿಯಿಂದ ಹೊರತರುವವನಾಗಿರುತ್ತಾನೆ. ಈ ಎಲ್ಲ ಕಾರ್ಯಗಳನ್ನು ಮಾಡುವವನಂತು ಅಲ್ಲಾಹ್. ಹೀಗಿರುತ್ತ ನೀವೆತ್ತ ದಾರಿತಪ್ಪಿ ಸಾಗುತ್ತಿರುವಿರಿ? - ಅಲ್‌ಅನ್‌ಆಮ್: 93-95

ಮಕ್ಕಾದ ಜನರು ಮುಹಮ್ಮದ್(ಸ) ದೇವಸಂದೇಶವಾಹಕರೆಂಬ ಸತ್ಯವನ್ನು ನಿರಾಕರಿಸಿದಾಗ ಅವರು ಜನರೊಡನೆ ಹೇಳುತ್ತಿದ್ದರು; ಕಳೆದ ನಲ್ವತ್ತು ವರ್ಷಗಳಿಂದ ನಿಮ್ಮ ಮಧ್ಯೆಯೇ ಜೀವಿಸುತ್ತಿದ್ದ ನಾನು ಎಂದಾದರೂ ಯಾವುದಾದರೂ ವಿಷಯದಲ್ಲಿ ಸುಳ್ಳು ಹೇಳಿದ್ದುಂಟೇ? ಇಲ್ಲ, ಖಂಡಿತ ಇಲ್ಲ ಎಂದು ನೀವೇ ಒಪ್ಪುತ್ತಿರುವಿರಿ. ಹಾಗಿರುವಾಗ ನಾನು ಅಲ್ಲಾಹನ ಕುರಿತು (ಅವನು ನನ್ನ ಮೇಲೆ ತನ್ನ ಸಂದೇಶ ಅವತರಿಸಿರುವನೆಂದು) ಸುಳ್ಳು ಹೇಳಬಲ್ಲೆನೆಂದು ನೀವು ಹೇಗೆ ಊಹಿಸುವಿರಿ?

ಹೌದು, ಕೆಲವರು ಅಲ್ಲಾಹನ ನೈಜ ಸಂದೇಶವನ್ನು ನಿರಾಕರಿಸುವ ದುರುದ್ದೇಶದಿಂದ, ಬಹಳ ಉದ್ಧಟತನದಿಂದ, ಅಲ್ಲಾಹನ ಬಗ್ಗೆ ಸುಳ್ಳು ಹೇಳಿಬಿಡುತ್ತಾರೆ. ಒಮ್ಮೆ ಅವರು ಅಲ್ಲಾಹನ ಸಂದೇಶ ನಮ್ಮ ಮೇಲೂ ಅವತೀರ್ಣಗೊಂಡಿದೆ ಎಂದು ಸುಳ್ಳು ಹೇಳಿದರೆ, ಇನ್ನೊಮ್ಮೆ ಅಲ್ಲಾಹನು ಅವತರಿಸಿದಂತಹ ಸಂದೇಶವನ್ನು ನಾವೂ ಅವತರಿಸಬಲ್ಲೆವೆಂದು ವಾದಿಸ ತೊಡಗುತ್ತಾರೆ. ಇದು ಅಲ್ಲಾಹನ ಬಗ್ಗೆ ಅವರು ಹೇಳುವ ಘೋರ ಸುಳ್ಳಾಗಿದೆ.

ಈ ರೀತಿ ವರ್ತಿಸುವವರು ಅತಿ ದೊಡ್ಡ ಅಕ್ರಮಿಗಳು ಎಂದು ಮೇಲಿನ ವಾಕ್ಯಗಳಲ್ಲಿ ಅಲ್ಲಾಹನು ತಿಳಿಸಿರುವನು. ಇಂದು ಅವರಿಗೆ ಇಂತಹ ಅಕ್ರಮಗಳನ್ನು ಮಾಡಲು ಅವಕಾಶ ಕೊಡಲಾಗಿದೆ. ಆದರೆ ಮುಕ್ತ ಸ್ವಾತಂತ್ರ್ಯದ ಈ ಅವಧಿ ಮುಗಿದು ಮರಣವು ಆಸನ್ನವಾದಾಗ ಅವರ ಅವಸ್ಥೆ ಅತ್ಯಂತ ಹೀನಾಯವಾಗಿ ಬಿಡುವುದು. ಅವರು ಮೂರ್ಛಾವಸ್ಥೆಯಲ್ಲಿರುವಾಗ ಮರಣ ದೂತರು ಅವರ ಮುಂದೆ ಬಂದು ಕೈಚಾಚಿ, "ಕೊಡು ನಿನ್ನ ಜೀವ" ಎಂದು ಆದೇಶಿಸುವರು. ಅವರ ಕುಕೃತ್ಯಗಳನ್ನೆಲ್ಲಾ ಒಂದೊಂದಾಗಿ ನೆನಪಿಸಿ ಹಂಗಿಸುವರು.

ನೀವಿಂದು ನವಜಾತ ಶಿಶುವಿನಂತೆ ಬರಿಗೈಯಲ್ಲಿ ಬಂದಿರುವಿರಿ. ನಿಮ್ಮ ಬಳಿ ಇದ್ದ ಸೊತ್ತು-ಸಂಪತ್ತುಗಳಾಗಲೀ ನೀವು ಅಭಿಮಾನ ಪಡುತ್ತಿದ್ದ ಹಾಗೂ ನಂಬಿ ಕೂತಿದ್ದ ಆ ನಿಮ್ಮ 'ಸಂರಕ್ಷಕ'ರಾಗಲೀ ಯಾರೂ ನಿಮ್ಮ ಜೊತೆಗಿಲ್ಲ. ನಿಮ್ಮೆಲ್ಲಾ ಸಂಪರ್ಕ, ಸಂಬಂಧಗಳು, ನಿಮ್ಮೆಲ್ಲಾ ವಾದಗಳು ಮುರಿದುಬಿದ್ದಿವೆ ಎಂದು ಅವರೊಡನೆ ಹೇಳಲಾಗುವುದು.

ಇಲ್ಲಿಯೂ ಅಲ್ಲಾಹನು ತಮ್ಮ ಪರಿಸರದಲ್ಲಿ ತುಂಬಿರುವ ದೇವ ಮಹಿಮೆಯ ಸಾಕ್ಷಾತ್ಕಾರಗಳನ್ನು ನೋಡಿ ಪಾಠ ಕಲಿಯಲು ಜನರಿಗೆ ಆದೇಶಿಸಿರುವನು. ಧಾನ್ಯ ಮತ್ತು ಬೀಜಗಳನ್ನು ಸೀಳಿ ಮೊಳಕೆ ತೆಗೆಯುವವನು, ಜೀವಕಳೆಯೇ ಇಲ್ಲದ ನೆಲವನ್ನು ಹಸಿರಾಗಿ ಜೀವಂತಗೊಳಿಸುವವನು ಮತ್ತು ಜೀವಗಳನ್ನು ತಾನಿಚ್ಛಿಸಿದಾಗ ನಿರ್ಜೀವಗೊಳಿಸುವವನು ಆ ಅಲ್ಲಾಹನೊಬ್ಬನೇ. ಅವನನ್ನು ಬಿಟ್ಟು ಅವರಿವರ ದಾಸ್ಯ ಮಾಡುತ್ತಾ ದಾರಿತಪ್ಪಿ ಅಲೆದಾಡಬೇಡಿ ಎಂದು ಸೂಚಿಸಿರುವನು.

5

"ನಾವು ನಿಮಗಿಂತ ಮೊದಲು ಅನೇಕ ಜನಾಂಗಗಳಿಗೆ ಸಂದೇಶವಾಹಕರನ್ನು ಕಳುಹಿಸಿದೆವು. ಆ ಜನಾಂಗಗಳು ವಿನಯದಿಂದ ನಮ್ಮ ಮುಂದೆ ಬಾಗುವಂತೆ ಅವರನ್ನು ಕಷ್ಟ ಕಾರ್ಪಣ್ಯಗಳಲ್ಲಿ ಸಿಲುಕಿಸಿದೆವು. ನಮ್ಮ ಕಡೆಯಿಂದ ಅವರ ಮೇಲೆ ಕಷ್ಟ ಬಂದಾಗ ಅವರೇಕೆ ವಿನಯ ತೋರಲಿಲ್ಲ? ಆದರೆ ಅವರ ಹೃದಯಗಳು ಇನ್ನಷ್ಟು ಕಠಿಣವಾದವು ಮತ್ತು ನೀವು ಮಾಡುತ್ತಿರುವುದೆಲ್ಲಾ ಚೆನ್ನಾಗಿದೆಯೆಂದು ಶೈತಾನನು ಅವರನ್ನು ಸಮಾಧಾನ ಪಡಿಸಿದನು. ಅನಂತರ ಅವರು, ತಮಗೆ ಕೊಟ್ಟ ಬುದ್ಧಿವಾದವನ್ನು ಮರೆತು ಬಿಟ್ಟಾಗ ನಾವು ಅವರಿಗಾಗಿ ಎಲ್ಲ ವಿಧದ ಸಂಪನ್ನತೆಯ ದ್ವಾರಗಳನ್ನು ತೆರೆದು ಬಿಟ್ಟೆವು. ಅವರಿಗೆ ದಯಪಾಲಿಸಿದ ಕೊಡುಗೆಗಳಲ್ಲಿ ಅವರು ಚೆನ್ನಾಗಿ ಮಗ್ನರಾಗಿದ್ದಾಗ ನಾವು ಹಠಾತ್ತನೆ ಅವರನ್ನು ಹಿಡಿದೆವು. ಆಗ ಅವರು ಯಾವುದೇ ಒಳಿತಿನ ಬಗ್ಗೆ ನಿರಾಶರಾಗಿದ್ದರು. ಹೀಗೆ ಅನ್ಯಾಯವೆಸಗಿದವರ ಮೂಲವೇ ಕಡಿದು ಹಾಕಲ್ಪಟ್ಟಿತು. ಸರ್ವಸ್ತುತಿಯು ಸರ್ವಲೋಕಗಳ ಪಾಲಕ ಪ್ರಭುವಾದ ಅಲ್ಲಾಹನಿಗೆ.

ಓ ಪೈಗಂಬರರೇ, ಇವರೊಡನೆ ಕೇಳಿರಿ- ಅಲ್ಲಾಹ್ ನಿಮ್ಮ ದೃಷ್ಟಿಯನ್ನೂ ಶ್ರವಣವನ್ನೂ ನಿಮ್ಮಿಂದ ಕಸಿದುಕೊಂಡು ನಿಮ್ಮ ಹೃದಯಗಳಿಗೆ ಮುದ್ರೆಯೊತ್ತಿ ಬಿಟ್ಟರೆ ಈ ಶಕ್ತಿಗಳನ್ನು ನಿಮಗೆ ಮರಳಿಸಲು ಅಲ್ಲಾಹನ ಹೊರತು ಇನ್ನಾವ ದೇವನಿದ್ದಾನೆ? ನಾವು ಪದೇಪದೇ ನಮ್ಮ ನಿದರ್ಶನಗಳನ್ನು ಹೇಗೆ ಇವರ ಮುಂದೆ ಇರಿಸುತ್ತೇವೆ ಮತ್ತು ಇವರು ಅವುಗಳನ್ನು ಕಂಡೂ ಕಾಣದಂತೆ ಹೇಗೆ ವರ್ತಿಸುತ್ತಾರೆಂಬುದನ್ನು ನೋಡಿರಿ. ಹೇಳಿರಿ- ಅಲ್ಲಾಹನ ಕಡೆಯಿಂದ ನಿಮ್ಮ ಮೇಲೆ ಆಕಸ್ಮಾತ್ ಅಥವಾ ಪ್ರತ್ಯಕ್ಷ ಯಾತನೆ ಬಂದೆರಗಿದರೆ ಅತ್ಯಾಚಾರಿಗಳ ವಿನಾ ಇನ್ನಾರಾದರೂ ನಾಶ ಹೊಂದುವರೇ ಎಂದು ಯೋಚಿಸಿದಿರಾ? ನಾವು ಎಲ್ಲ

ಸಂದೇಶವಾಹಕರನ್ನು ಸಜ್ಜನರಿಗೆ ಸುವಾರ್ತೆ ನೀಡುವವರೂ ದುರ್ಜನರಿಗೆ ಎಚ್ಚರಿಗೆ ಕೊಡುವವರೂ ಆಗಿ ಮಾತ್ರ ಕಳುಹಿಸುತ್ತೇವೆ. ಆ ಬಳಿಕ ಅವರ ಮಾತನ್ನು ನಂಬಿ, ತಮ್ಮ ಕರ್ಮವಿಧಾನವನ್ನು ಸರಿಪಡಿಸಿಕೊಂಡವರಿಗೆ ಯಾವ ಭಯದ ಮತ್ತು ವ್ಯಥೆಯ ಸಂಭವವೂ ಇರುವುದಿಲ್ಲ. ನಮ್ಮ ನಿದರ್ಶನಗಳನ್ನು ಸುಳ್ಳಾಗಿಸುವವರು ತಮ್ಮ ನಿರಾಕರಣೆಯ ಫಲವಾಗಿ ಶಿಕ್ಷೆ ಅನುಭವಿಸಿಯೇ ತೀರುವರು. ಓ ಪೈಗಂಬರರೇ, ಇವರೊಡನೆ ಹೇಳಿರಿ- "ನನ್ನಲ್ಲಿ ಅಲ್ಲಾಹನ ಖಜಾನೆಗಳಿವೆಯೆಂದು ನಾನು ನಿಮ್ಮೊಡನೆ ಹೇಳುವುದಿಲ್ಲ. ನಾನು ಪರೋಕ್ಷ ಜ್ಞಾನಿಯೂ ಅಲ್ಲ. ನಾನು ದೇವಚರನೆಂದೂ ಹೇಳುವುದಿಲ್ಲ. ನಾನು ನನ್ನ ಮೇಲೆ ಅವತೀರ್ಣಗೊಳ್ಳುತ್ತಿರುವ 'ದಿವ್ಯವಾಣಿ'ಯ ಅನುಸರಣೆಯನ್ನು ಮಾತ್ರ ಮಾಡುತ್ತಿದ್ದೇನೆ" ಮತ್ತು ಇವರೊಡನೆ, "ಕುರುಡನೂ ದೃಷ್ಟಿಯುಳ್ಳವನೂ ಸರಿಸಮಾನನಾಗಿರಲು ಸಾಧ್ಯವೇ? ನೀವು ವಿವೇಚಿಸುವುದಿಲ್ಲವೇ?" ಎಂದು ಇವರೊಡನೆ ಕೇಳಿರಿ.

ಓ ಪೈಗಂಬರರೇ, ತಮ್ಮ ಪ್ರಭುವಿನ ಮುಂದೆ ಆತನ ಹೊರತು (ಅಧಿಕಾರ ಬಲವುಳ್ಳ) ಸಹಾಯಕರು ಅಥವಾ ಶಿಫಾರಸ್ಸು ಮಾಡುವವರು ಯಾರೂ ಇಲ್ಲದಂತಹ ಸ್ಥಿತಿಯಲ್ಲಿ ಹಾಜರುಪಡಿಸಲಿದ್ದೇವೆಂದು ಭಯಪಡುವವರಿಗೆ ನೀವು ಇದರ (ಈ ದಿವ್ಯಬೋಧನೆಯ) ಮೂಲಕ ಉಪದೇಶ ನೀಡಿರಿ. ಪ್ರಾಯಶಃ (ಈ ಉಪದೇಶದಿಂದ ಜಾಗೃತರಾಗಿ) ಇವರು ದೇವಭಯದ ನೀತಿ ಅನುಸರಿಸಲೂಬಹುದು. ಯಾರು ತಮ್ಮ ಪ್ರಭುವನ್ನು ಸಂಜೆ ಮುಂಜಾನೆಗಳಲ್ಲಿ ಪ್ರಾರ್ಥಿಸುತ್ತಾರೋ ಹಾಗೂ ಅವನ ಸಂಪ್ರೀತಿಯನ್ನರಸುತ್ತಿರುತ್ತಾರೋ ಅವರನ್ನು ನಿಮ್ಮಿಂದ ದೂರಕ್ಕೆ ಅಟ್ಟಬೇಡಿರಿ. ಅವರ ಲೆಕ್ಕದಲ್ಲಿನ ಯಾವ ಭಾರವೂ ನಿಮ್ಮ ಮೇಲಿಲ್ಲ ಮತ್ತು ನಿಮ್ಮ ಲೆಕ್ಕದಲ್ಲಿನ ಯಾವ ಭಾರವೂ ಅವರ ಮೇಲಿಲ್ಲ. ಹೀಗಿದ್ದರೂ ನೀವು ಅವರನ್ನು ದೂರಕ್ಕೆ ಅಟ್ಟಿದರೆ ನೀವು ಅಕ್ರಮಿಗಳಲ್ಲಿ ಸೇರುವಿರಿ. ವಾಸ್ತವದಲ್ಲಿ ನಾವು ಇದೇ ರೀತಿಯಲ್ಲಿ ಇವರ ಪೈಕಿ ಕೆಲವರನ್ನು ಕೆಲವರ ಮೂಲಕ ಪರೀಕ್ಷೆಗೊಳಪಡಿಸಿದ್ದೇವೆ. ಇದು ಅವರು ಇವರನ್ನು ಕಂಡು, "ನಮ್ಮ ಪೈಕಿ ಅಲ್ಲಾಹನ ಅನುಗ್ರಹವಾದುದು ಇವರ ಮೇಲೆಯೇ?" ಎಂದು ಕೇಳಲಿಕ್ಕಾಗಿ. ಹೌದು, ಅಲ್ಲಾಹನು ತನ್ನ ಕೃತಜ್ಞ ದಾಸರನ್ನು ಇವರಿಗಿಂತ ಚೆನ್ನಾಗಿ ಅರಿಯುವುದಿಲ್ಲವೇ? ನಮ್ಮ ನಿದರ್ಶನಗಳ ಮೇಲೆ ವಿಶ್ವಾಸವಿಡುವವರು ನಿಮ್ಮ ಬಳಿಗೆ ಬಂದಾಗ ಅವರೊಡನೆ ಹೇಳಿರಿ- ನಿಮ್ಮ ಮೇಲೆ ಶಾಂತಿ ಇದೆ. ನಿಮ್ಮ ಪ್ರಭು ಔದಾರ್ಯ ನೀತಿಯನ್ನು ತನ್ನ ಮೇಲೆ ವಿಧಿಸಿಕೊಂಡಿದ್ದಾನೆ. ನಿಮ್ಮಲ್ಲಾರಾದರೂ ತಿಳಿಗೇಡಿತನದಿಂದ ದೋಷ ಮಾಡಿಬಿಟ್ಟು, ಆ ಬಳಿಕ ಪಶ್ಚಾತ್ತಾಪಪಟ್ಟು ತನ್ನನ್ನು ಸುಧಾರಿಸಿಕೊಂಡರೆ, ಅವನು (ಅಲ್ಲಾಹನು) ಅವನನ್ನು ಕ್ಷಮಿಸುತ್ತಾನೆ ಮತ್ತು ಮೃದುನೀತಿಯನ್ನನುಸರಿಸುತ್ತಾನೆ."

- ಅಲ್ ಅನ್‌ಆಮ್ : 42-54.

ಈ ವಾಕ್ಯಗಳಲ್ಲಿ ದೇವನು, ನಮ್ಮ ನೈಸರ್ಗಿಕ ಸಾಮರ್ಥ್ಯಗಳನ್ನು ಮತ್ತು ನಮ್ಮ ಆಂತರಿಕ ಪ್ರಜ್ಞೆಯನ್ನು ಜಾಗೃತಗೊಳಿಸಿರುವನು. ಈ ಸಾಮರ್ಥ್ಯಗಳು ಮತ್ತು ಈ ಸೂಕ್ಷ್ಮ ಹಾಗೂ ಪಾವನ ಪ್ರಜ್ಞೆ ನಿಮ್ಮ ದುಷ್ಕೃತ್ಯಗಳಿಂದಾಗಿ ನಿಷ್ಕ್ರಿಯವಾಗಲೂಬಹುದು, ಮನುಷ್ಯ ವರ್ಗವೊಂದು ಆ ಹಂತವನ್ನು ತಲುಪಿಬಿಟ್ಟಿತೆಂದರೆ ಮತ್ತೆ ವಿನಾಶ ಅದರ ಪಾಲಿಗೆ ಕಟ್ಟಿಟ್ಟ

ಬುತ್ತಿ, ಎಂದು ದೇವನು ಇಲ್ಲಿ ಎಚ್ಚರಿಸಿರುವನು. ಈ ವಿಷಯದಲ್ಲಿ ಪ್ರವಾದಿಗಳಿಗೆ ಗತ ಸಮುದಾಯಗಳ ಪ್ರವೃತ್ತಿಯನ್ನು ನೆನಪಿಸುತ್ತಾ, ನಿಮಗಿಂತ ಮುಂಚೆ ಗತಿಸಿದ ಸಮುದಾಯಗಳ ಕಡೆಗೂ ಪ್ರವಾದಿಗಳನ್ನು ಕಳಿಸಿದ್ದೆವು. ಜನರಿಗೆ ಬುದ್ಧಿ ಬರಲಿ, ತಮ್ಮ ದುರಾಚಾರಗಳನ್ನೆಲ್ಲಾ ನಿಲ್ಲಿಸಿ ಅವರು ದೇವಭಕ್ತಿಯ ಮಾರ್ಗಕ್ಕೆ ಮರಳಲಿ. ದೇವನಿಗೆ ಶರಣಾಗಿ, ಕ್ಷಮೆ ಕೇಳಿ ಮುಂದೆಯಾದರೂ ಸರಿದಾರಿ ಹಿಡಿಯಲಿ ಎಂದು ಅವರನ್ನು ವಿವಿಧ ಸಂಕಷ್ಟ-ವಿಪತ್ತುಗಳಿಗೆ ಗುರಿಪಡಿಸಿ ನೋಡಿದೆವು. ಆದರೂ ಅವರು ಶರಣಾಗಲಿಲ್ಲ ಎಂದು ತಿಳಿಸಲಾಗಿದೆ.

ಮನುಷ್ಯ ಪ್ರಕೃತಿಯೇ ಹಾಗೆ. ಸಾಮಾನ್ಯ ಪರಿಸ್ಥಿತಿಯಲ್ಲಿ ಅವರು ಮೈಮರೆತು ನಿಶ್ಚಿಂತರಾಗಿರುತ್ತಾರೆ. ಆದರೆ ಏನಾದರೂ ವಿಪತ್ತು ಬಂದೆರಗಿದಾಗ ಅವರ ಸುಪ್ತ ಪ್ರಜ್ಞೆಯು ಎಚ್ಚೆತ್ತು ತಮ್ಮ ತಪ್ಪಿನ ಅರಿವಾಗಿ, ದೇವ ಸಾನ್ನಿಧ್ಯಕ್ಕೆ ಧಾವಿಸಿ ತಮ್ಮ ಪಾಪಗಳ ಬಗ್ಗೆ ರೋದಿಸುತ್ತಾ ಕ್ಷಮೆ ಯಾಚಿಸಿ ಅವನ ಅಭಯ ಕೇಳುತ್ತಾರೆ. ಆದರೆ ಕೆಲವರು ಇಂತಹ ವಿಪತ್ತುಗಳು ಬಂದೆರಗಿದಾಗಲೂ ಎಚ್ಚರಗೊಳ್ಳುವುದಿಲ್ಲ. ಏಕೆಂದರೆ, ಅವರ ದುಷ್ಟತೆ ಮತ್ತು ದುರಾಚಾರಗಳು, ಅವರ ಮೂಲ ಮನುಷ್ಯ ಪ್ರಕೃತಿಯನ್ನು ಅಳಿಸಿಬಿಡುವಷ್ಟು ವಿಪರೀತ ವಾಗಿರುತ್ತವೆ. ಅವರ ಮನಸ್ಸುಗಳು ಎಷ್ಟು ಕಠಿಣವಾಗಿ ಬಿಡುತ್ತವೆಂದರೆ, ಶೈತಾನನ ವಂಚನೆ ಗೊಳಗಾಗಿ ಅವರು ತಮ್ಮ ಅಕ್ರಮ ಮತ್ತು ಪಾಪಗಳನ್ನು ಕೂಡಾ ಸಾಧನೆಗಳೆಂದು ಭಾವಿಸ ತೊಡಗುತ್ತಾರೆ. ಪಶ್ಚಾತ್ತಾಪ ಪಡುವ ಬದಲು ಪಾಪಗಳ ಬಗ್ಗೆ ಅಭಿಮಾನಪಡುತ್ತಾರೆ.

ಈ ರೀತಿ ಜನರು ಎಲ್ಲ ಒಳಿತುಗಳನ್ನೂ ತಿರಸ್ಕರಿಸಿದಾಗ ಮತ್ತು ವಿಪತ್ತುಗಳು ಬಂದಾಗಲೂ ಎಚ್ಚರಗೊಳ್ಳದಿದ್ದಾಗ ಅಲ್ಲಾಹನು ಭಾರೀ ಸುಖ-ಸಂಪತ್ತುಗಳನ್ನು ಕೊಡುವ ಮೂಲಕ ಅವರನ್ನು ಪರೀಕ್ಷಿಸಿದನು. ಅವರು ಅದರಲ್ಲಿ ಮಗ್ನರಾಗಿ ಮೈಮರೆತಿದ್ದಾಗಲೇ ಅವರನ್ನು ಶಿಕ್ಷೆಗೆ ಗುರಿಪಡಿಸಿ ಹತಾಶೆಗೊಳಿಸಿದನು. ಕೊನೆಗೂ ಅವರ ಮೂಲೋತ್ಪಾಟನೆ ಆಯಿತು.

ಹೀಗೆ ಗತ ಜನಾಂಗಗಳ ಇತಿಹಾಸ ಹೇಳಿ ಎಚ್ಚರಿಸಿದ ಬಳಿಕ ಮನುಷ್ಯನಿಗೆ, ಸ್ವತಃ ತನ್ನ ಬಗ್ಗೆ ಚಿಂತಿಸಿ ನೋಡೆಂದು ಪ್ರೇರೇಪಿಸಲಾಗಿದೆ. ಕಣ್ಣು, ಕಿವಿ, ಹೃದಯಗಳಂತಹ ದೇವನ ಕೊಡುಗೆಗಳನ್ನು ನೆನಪಿಸಿ, ಅವುಗಳನ್ನೆಲ್ಲಾ ಕೊಟ್ಟ ಆ ದೇವನಿಂದ ಹೇಗೆ ವಿಮುಖ ರಾಗಿದ್ದಾರೆಂದು ಇಲ್ಲಿ ಪ್ರಶ್ನಿಸಲಾಗಿದೆ.

ಸಾಮಾನ್ಯವಾಗಿ ಸಂಪತ್ತು ಮತ್ತು ಅಧಿಕಾರವುಳ್ಳವರೇ ಹೆಚ್ಚು ಅಹಂಕಾರಿಗಳೂ ದುಷ್ಟರೂ ಆಗಿರುತ್ತಾರೆ. ಈ ಕೊಡುಗೆಗಳ ಬಗ್ಗೆ ಕೃತಜ್ಞರಾಗಿರುವ ಬದಲು, ದುಷ್ಟತನದಲ್ಲಿ ವಿಪರೀತ ಮುಂದುವರಿದು ತಮ್ಮ ಮೂಲ ಪ್ರಕೃತಿಯನ್ನೇ ಕಳೆದುಕೊಂಡಿರುತ್ತಾರೆ. ಆದರೆ ಜನಸಾಮಾನ್ಯರು ಹಾಗಲ್ಲ. ದೊಡ್ಡವರ ಪ್ರಭಾವಕ್ಕೊಳಗಾಗಿ ಅವರೂ ಪಾಪ ಮಾಡಬಹುದು. ಆದರೆ ಅವರು ಅಹಂಕಾರಿಗಳಾಗಿರುವುದಿಲ್ಲ. ದೇವಸಂದೇಶ ಅವರ ಮುಂದೆ ಬಂದಾಗ ಅವರ ಮೂಲ ಪ್ರಕೃತಿ ಎಚ್ಚರಗೊಳ್ಳುತ್ತದೆ. ವಿಪತ್ತುಗಳು ಬಂದಾಗ ಅವರು ಜಾಗೃತರಾಗಿ ದೇವನಿಗೆ ಶರಣಾಗುತ್ತಾರೆ. ತಮ್ಮಿಂದಾದ ಪ್ರಮಾದಕ್ಕಾಗಿ ಅಳುತ್ತಾ ರೋದಿಸುತ್ತಾ ಕ್ಷಮೆ

ಯಾಚಿಸುತ್ತಾರೆ. ಅವನ ಸಂದೇಶದ ಮೇಲೆ ವಿಶ್ವಾಸವಿಡುತ್ತಾರೆ. ನಾಳೆ ಅವನ ಮುಂದೆ ಹಾಜರಾಗಲಿಕ್ಕಿದೆ ಎಂದು ಹೆದರುತ್ತಾರೆ.

ಪ್ರವಾದಿಗಳು 'ದೊಡ್ಡವರಿಗೆ' ಎಚ್ಚರಿಕೆ ಕೊಡುತ್ತಾರೆ. ದುರ್ಬಲ-ಮರ್ದಿತ ಜನರಿಗೆ ಹೊಸ ಬದುಕಿನ ಸುವಾರ್ತೆ ಕೊಡುತ್ತಾರೆ. ದೇವನು ನಮ್ಮನ್ನು ಬಿಟ್ಟು ಈ ಮರ್ದಿತ ಜನರನ್ನು ಅನುಗ್ರಹಿಸುವನೇ ಎಂದು ಅಹಂಕಾರಿಗಳು ಹುಬ್ಬೇರಿಸುತ್ತಾರೆ. ಪ್ರವಾದಿ ಮುಹಮ್ಮದ್(ಸ) ಅವರ ಮೇಲೆ ಪ್ರಥಮವಾಗಿ ವಿಶ್ವಾಸವಿಟ್ಟವರಲ್ಲಿ ಹೆಚ್ಚಿನವರು ಮರ್ದಿತ ವರ್ಗಗಳಿಗೆ ಸೇರಿದವ ರಾಗಿದ್ದರು. ಅವರ ಬಗ್ಗೆ ಮಕ್ಕಾದ ಬಲಿಷ್ಠ ವರ್ಗಕ್ಕೆ ಬಹಳ ತಾತ್ಸಾರವಿತ್ತು. ಸತ್ಯ ಸ್ವೀಕಾರ ಮಾಡಿದ ಈ ವ್ಯಕ್ತಿಗಳ ಬಗ್ಗೆ ಅವರು "ಈ ಕೆಳ ವರ್ಗದವರ ಮೇಲೆ ದೇವನು ಅನುಗ್ರಹ ತೋರುವನೋ?" ಎಂದು ಛೇಡಿಸುವ ಮಾತುಗಳನ್ನಾಡುತ್ತಿದ್ದರು. ತಮ್ಮ ಜೊತೆ ಮಾತನಾಡ ಬೇಕಿದ್ದರೆ ಅವರನ್ನೆಲ್ಲಾ ದೂರ ಕಳಿಸಬೇಕೆಂದು ಪ್ರವಾದಿವರ್ಯರ(ಸ) ಮುಂದೆ ಶರತ್ತುಗಳ ನ್ನೊಡ್ಡುತ್ತಿದ್ದರು. ಆದರೆ ಅಲ್ಲಾಹನು ಇಲ್ಲಿ ಅವರ ಈ ಅಹಂಕಾರದ ನೀತಿಯನ್ನು ಖಂಡಿಸುತ್ತಾ ಯಾರು ಕೃತಜ್ಞ ದಾಸರೆಂಬುದು ತಮಗೆ ಚೆನ್ನಾಗಿ ತಿಳಿದಿದೆ ಎಂದು ಹೇಳಿರುವುದಲ್ಲದೆ, ಯಾವ ಕಾರಣಕ್ಕೂ ಈ ಸದ್ಭಕ್ತರನ್ನು ದೂರ ಮಾಡಬಾರದೆಂದು ಪ್ರವಾದಿವರ್ಯರಿಗೆ(ಸ) ಆದೇಶಿಸಿರುವನು. ಅಹಂಕಾರಿಗಳ ಬೇಡಿಕೆಯಂತೆ ಈ ಮರ್ದಿತ ಜನರನ್ನು ದೂರಗೊಳಿಸುವ ಬದಲು, ಅವರು ನಿಮ್ಮ ಬಳಿ ಬಂದಾಗ ಅವರಿಗೆ ಶಾಂತಿಯನ್ನು ಕೋರಿ, ಅಲ್ಲಾಹನ ಅನುಗ್ರಹವನ್ನು ನೆನಪಿಸಿರಿ ಎಂದು ಇಲ್ಲಿ ಹೇಳಲಾಗಿದೆ.

ಹಾಗೆಯೇ ಮನುಷ್ಯನು ಅಜ್ಞಾನದಲ್ಲಿ ಏನಾದರೂ ಪ್ರಮಾದ ಮಾಡಿದ್ದರೂ ಆ ಬಳಿಕ ಪಶ್ಚಾತ್ತಾಪಪಟ್ಟು ದೇವನೊಡನೆ ಕ್ಷಮೆ ಯಾಚಿಸಿ, ಮುಂದಕ್ಕೆ ತನ್ನನ್ನು ಸರಿಪಡಿಸಿಕೊಂಡರೆ ಅತ್ಯಂತ ಕ್ಷಮಾಶೀಲನೂ ಕರುಣಾಮಯಿಯೂ ಆಗಿರುವ ಅಲ್ಲಾಹನು ಖಂಡಿತ ಕ್ಷಮಿಸುವನೆಂದು ಈ ವಾಕ್ಯಗಳಲ್ಲಿ ಸತ್ಯವಿಶ್ವಾಸಿಗಳಿಗೆ ಭರವಸೆ ಕೊಡಲಾಗಿದೆ.

6

"(ಪೈಗಂಬರರೇ) ಪ್ರಶಂಸೆಗಳೆಲ್ಲ ಅಲ್ಲಾಹನಿಗೆ ಮತ್ತು ಅವನು ಪುನೀತಗೊಳಿಸಿದ ಅವನ ದಾಸರ ಮೇಲೆ ಶಾಂತಿ ಇರಲೆಂದು ಹೇಳಿರಿ. (ಇವರೊಡನೆ ಕೇಳಿರಿ) ಅಲ್ಲಾಹ್ ಉತ್ತಮನೋ ಅಥವಾ ಇವರು ಅವನ ಸಹಭಾಗಿಗಳಾಗಿ ಮಾಡುವ ಆರಾಧ್ಯರುಗಳು ಉತ್ತಮರೋ? ಆಕಾಶ ಗಳನ್ನೂ ಭೂಮಿಯನ್ನೂ ಸೃಷ್ಟಿಸಿದವನೂ ನಿಮಗಾಗಿ ಆಕಾಶದಿಂದ ನೀರನ್ನು ಸುರಿಸಿದವನೂ ತನ್ಮೂಲಕ ನಿಮ್ಮಿಂದ ಬೆಳೆಸಲು ಸಾಧ್ಯವಿಲ್ಲದ ಮರಗಳಿರುವ ಸುಂದರ ಉದ್ಯಾನಗಳನ್ನು ಬೆಳೆಸಿದವನೂ ಯಾರು? ಅಲ್ಲಾಹನೊಂದಿಗೆ ಇತರ ದೇವರೂ (ಈ ಕಾರ್ಯಗಳಲ್ಲಿ ಸಹಭಾಗಿ ಯಾಗಿ) ಇರುವರೇ? (ಇಲ್ಲ.) ವಾಸ್ತವದಲ್ಲಿ ಇವರೇ ನೇರ ಮಾರ್ಗದಿಂದ ಸರಿದು ನಡೆಯುತ್ತಿ ದ್ದಾರೆ. ಭೂಮಿಯನ್ನು ವಾಸಸ್ಥಾನವನ್ನಾಗಿ ಮಾಡಿದವನೂ ಅದರೊಳಗೆ ನದಿಗಳನ್ನು

ಹರಿಸಿದವನೂ ಅದರಲ್ಲಿ (ಪರ್ವತಗಳ) ಮೊಳೆಗಳನ್ನು ನಾಟಿದವನೂ ಎರಡು ಜಲಾಗಾರಗಳ ಮಧ್ಯೆ ತಡೆಯನ್ನಿರಿಸಿದವನೂ ಯಾರು? ಅಲ್ಲಾಹನೊಂದಿಗೆ ಇತರ ದೇವರೂ (ಈ ಕಾರ್ಯಗಳಲ್ಲಿ ಸಹಭಾಗಿಯಾಗಿ) ಇರುವರೇ? ಇಲ್ಲ; ಆದರೆ ಇವರಲ್ಲಿ ಹೆಚ್ಚಿನವರು ತಿಳಿಗೇಡಿಗಳು. ಕಳವಳಗೊಂಡವನು ಅವನನ್ನು ಪ್ರಾರ್ಥಿಸಿದಾಗ ಅವನ ಪ್ರಾರ್ಥನೆಯನ್ನು ಆಲಿಸುವವನಾರು? ಅವನ ಸಂಕಷ್ಟವನ್ನು ನಿವಾರಿಸುವವನು ಯಾರು? ಮತ್ತು ನಿಮ್ಮನ್ನು ಭೂಮಿಯ ಪ್ರತಿನಿಧಿಯಾಗಿ ಮಾಡುವವನುಯಾರು? ಅಲ್ಲಾಹನೊಂದಿಗೆ ಇತರ ದೇವರೂ (ಈ ಕಾರ್ಯವನ್ನೆಸಗಲು) ಇರುವರೇ? ನೀವು ಅಲ್ಪವೇ ವಿವೇಚಿಸುತ್ತೀರಿ. ನೆಲ ಹಾಗೂ ಸಾಗರಗಳ ಅಂಧಕಾರಗಳಲ್ಲಿ ನಿಮಗೆ ದಾರಿ ತೋರಿಸುವವನೂ ತನ್ನ ಕೃಪೆಗಿಂತ ಮುಂಚಿತವಾಗಿ ಮಾರುತಗಳನ್ನು ಸುವಾರ್ತೆಯೊಂದಿಗೆ ಕಳುಹಿಸುವವನೂ ಯಾರು? ಅಲ್ಲಾಹನೊಂದಿಗೆ ಇತರ ದೇವರೂ ಇರುವರೇ? ಅಲ್ಲಾಹನು ಇವರು ಮಾಡುತ್ತಿರುವ 'ದೇವಸಹಭಾಗಿತ್ವ'ಗಿಂತ ಮಹೋನ್ನತನು. ಸೃಷ್ಟಿಯನ್ನಾರಂಭಿಸುವವನೂ ಆ ಬಳಿಕ ಅದರ ಪುನರಾವರ್ತನೆ ಮಾಡುವವನೂ ಯಾರು? ನಿಮಗೆ ಆಕಾಶಗಳಿಂದಲೂ ಭೂಮಿಯಿಂದಲೂ ಜೀವನಾಧಾರ ಕೊಡುವವನಾರು? ಅಲ್ಲಾಹನ ಜೊತೆ ಇತರ ದೇವರೂ (ಈ ಕಾರ್ಯಗಳಲ್ಲಿ ಪಾಲುದಾರರಾಗಿ) ಇರುವರೇ? ಹೇಳಿರಿ- ನೀವು ಸತ್ಯವಾದಿಗಳಾಗಿದ್ದರೆ ಪುರಾವೆಗಳನ್ನು ತನ್ನಿರಿ.'' - ಅನ್ನಮ್ಲ್ : 59-64

ಇಲ್ಲಿ ಸೃಷ್ಟಿಕರ್ತನು, ಎಲ್ಲ ಸ್ತುತಿ-ಸ್ತೋತ್ರಗಳಿಗೆ ತಾನು ಮಾತ್ರ ಅರ್ಹನೆಂಬ ವಾಸ್ತವಿಕತೆಯನ್ನು ಜನರಿಗೆ ನೆನಪಿಸಿರುವನು. ಅನಂತರ ಹಲವು ಅತ್ಯಂತ ವಿಚಾರ ಪ್ರಚೋದಕ ಪ್ರಶ್ನೆಗಳ ಮೂಲಕ ಜನರು ದೇವೇತರರ ದಾಸ್ಯದಿಂದ ಮುಕ್ತರಾಗಲು ಪ್ರೇರಣೆ ಕೊಟ್ಟಿರುವನು.

ತನ್ನ ಆಯ್ದ ದಾಸರಿಗೆ ಶಾಂತಿಯ ಆಶ್ವಾಸನೆ ಕೊಟ್ಟ ಬಳಿಕ ಅಲ್ಲಾಹನು ಜನರೊಡನೆ, ಅಲ್ಲಾಹನು ಉತ್ತಮನೋ ಅಥವಾ ನೀವೇ ಮಾಡಿಕೊಂಡಿರುವ ಆರಾಧ್ಯರು ಉತ್ತಮರೋ ಎಂದು ಪ್ರಶ್ನಿಸಿರುವನು. ತರುವಾಯ ಭೂಮಿ - ಆಕಾಶಗಳ ಸೃಷ್ಟಿ, ಮಳೆ ಬೆಳೆಗಳ ಸೃಷ್ಟಿ, ಭೂಮಿಯನ್ನು ವಾಸಯೋಗ್ಯವಾಗಿ ಮಾಡಿರುವುದು, ನೊಂದವನ ಮೊರೆ ಕೇಳಿ ಅವನ ನೋವು ನೀಗಿಸುವುದು, ಕತ್ತಲಲ್ಲಿ ದಾರಿ ತೋರುವುದು ಇತ್ಯಾದಿ ತನ್ನ ಹತ್ತು ಹಲವು ಅನುಗ್ರಹ ಮತ್ತು ವೈಶಿಷ್ಟ್ಯಗಳನ್ನು ನೆನಪಿಸಿ ಈ ಎಲ್ಲವನ್ನೂ ಕೊಡುವವನು ತಾನಾಗಿರುವಾಗ ತನ್ನ ಹೊರತು ಬೇರೆ ಆರಾಧ್ಯರಿದ್ದಾರೆಯೇ ಎಂದು ಪ್ರಶ್ನಿಸಿರುವನು. ಸಮುದ್ರದಲ್ಲಿ ಅದೆಷ್ಟೋ ಕಡೆ ಸಿಹಿನೀರು, ಉಪ್ಪುನೀರು, ಬಿಸಿನೀರು, ಕರಿ ನೀರುಗಳ ಝರಿಗಳು ಬಹಳ ಹತ್ತಿರದಲ್ಲೇ ಹರಿಯುತ್ತಿರುತ್ತವೆ. ಆದರೆ ಅವು ಪರಸ್ಪರ ಬೆರೆಯುವುದಿಲ್ಲ. ಅವುಗಳು ಬೆರೆಯದಂತೆ ಅವುಗಳ ನಡುವೆ ಪದರಗಳನ್ನು ನಿರ್ಮಿಸಿದವನು ಅಲ್ಲಾಹನೇ ಹೊರತು ಇತರ ಯಾರೂ ಅಲ್ಲ. ಶುಭಸೂಚಕ ಮಾರುತವನ್ನು ಕಳಿಸುವುದರಲ್ಲಾಗಲೀ ನಿಮಗೆ ಭೂಮಿ - ಆಕಾಶಗಳಿಂದ ಆಹಾರ ಒದಗಿಸುವುದರಲ್ಲಾಗಲೀ ಅವನೊಬ್ಬನನ್ನು ಬಿಟ್ಟರೆ ಬೇರೆ ಯಾರ ಪಾತ್ರವೂ ಇಲ್ಲ. ಹಾಗಿರುವಾಗ ನೀವೇಕೆ ಇತರ ಹಲವರ ದಾಸ್ಯ-ಆರಾಧನೆ ಮಾಡುತ್ತಿರುವಿರಿ? ಎಂದು ಅಲ್ಲಾಹನು ಇಲ್ಲಿ ಕೇಳಿರುವನು.

ಮಧ್ಯೆ ಮಧ್ಯೆ ಆಗಾಗ ಕೇಳಲಾದ "ಅಲ್ಲಾಹನ ಜೊತೆ ಬೇರೆ ಆರಾಧ್ಯರೂ ಇದ್ದಾರೆಯೇ?" ಎಂಬ ಪ್ರಶ್ನೆ ಬಹುದೇವೋಪಾಸಕರಿಗೆ ಒಂದು ಸವಾಲಾಗಿದೆ. ಹಾಗೆಯೇ ಅದು ಸತ್ಯಕ್ಕೆ ಶರಣಾಗಿರೆಂಬ ಪರೋಕ್ಷ ಕರೆಯೂ ಹೌದು. ಈ ವಾಕ್ಯಗಳ ಇಂಗಿತ ಇಷ್ಟೇ; ಎಲ್ಲವನ್ನೂ ಸೃಷ್ಟಿಸಿದವನು ನಾನು, ಎಲ್ಲರನ್ನೂ ಪರಿಪಾಲಿಸುತ್ತಿರುವವನು ನಾನು. ಭೂಮಿ-ಆಕಾಶಗಳನ್ನು ನಿಯಂತ್ರಿಸುತ್ತಿರುವವನು, ಎಲ್ಲ ಅದ್ಭುತಗಳ ಸೃಷ್ಟಿಕರ್ತ ಮತ್ತು ಮನುಷ್ಯರ ಎಲ್ಲ ಅಗತ್ಯಗಳನ್ನು ಈಡೇರಿಸುವವನು ಅವನು. ಹೀಗಿರುತ್ತಾ ಅವನನ್ನು ಮಾತ್ರ ಆರಾಧಿಸಿ, ಅವನಿಗೆ ಮಾತ್ರ ಕೃತಜ್ಞರಾಗಿ, ನಿಷ್ಠರಾಗಿ, ಸಮರ್ಪಿತರಾಗಿರಿ. ಅವನಿಗೆ ಸಲ್ಲಬೇಕಾದ ದಾಸ್ಯವನ್ನು ದೇವೇತರರಿಗೆ ಸಲ್ಲಿಸದಿರಿ. ಅವನ ಸಂಪ್ರೀತಿಯಲ್ಲೇ ನಿಮ್ಮ ಮುಕ್ತಿ ಅಡಗಿದೆ.

7

"ಇದು ಸಕಲ ಲೋಕಪಾಲಕನಿಂದ ಅವತೀರ್ಣಗೊಂಡುದಾಗಿದೆ. ಹೀಗಿರುತ್ತ ನೀವು ಈ ವಾಣಿಯ ಕುರಿತು ನಿರ್ಲಕ್ಷ್ಯ ತೋರುತ್ತೀರಾ? ಮತ್ತು ಈ ಅನುಗ್ರಹದಲ್ಲಿ- ಇದನ್ನು ತಿರಸ್ಕರಿಸುವುದನ್ನೇ ನಿಮ್ಮ ಪಾಲನ್ನಾಗಿ ಮಾಡಿಕೊಂಡಿರುವಿರಾ? ನೀವು ಪರಾಧೀನರಲ್ಲದಿದ್ದರೆ ಮತ್ತು ನಿಮ್ಮ ಭಾವನೆಯಲ್ಲಿ ನೀವು ಸತ್ಯವಾದಿಗಳಾಗಿದ್ದರೆ, ಮರಣ ಹೊಂದುತ್ತಿರುವವನ ಪ್ರಾಣವು ಗಂಟಲಿನ ವರೆಗೆ ತಲಪಿದ್ದಾಗ ಮತ್ತು ಅವನು ಸಾಯುತ್ತಿರುವುದನ್ನು ನೀವು ಕಣ್ಣಾರೆ ಕಾಣುತ್ತಿರುವಾಗ ಹೊರಟು ಹೋಗುತ್ತಿರುವ ಅವನ ಪ್ರಾಣವನ್ನು ಮರಳಿ ತರುವುದಿಲ್ಲವೇಕೆ? ಆಗ ಅವನಿಗೆ ನಿಮಗಿಂತಲೂ ನಾವು ಹೆಚ್ಚು ನಿಕಟವಾಗಿರುತ್ತೇವೆ. ಆದರೆ ನಿಮಗೆ ತೋರುವುದಿಲ್ಲ."
- ಅಲ್ ವಾಕಿಆಃ : **80-87**

ಈ ವಾಕ್ಯಗಳಲ್ಲಿ ಒಂದೆಡೆ ಪವಿತ್ರ ಕುರ್‌ಆನಿನ ಪರಿಚಯ ಇದೆಯಾದರೆ, ಇನ್ನೊಂದೆಡೆ ಮನುಷ್ಯನಿಗೆ ಅವನ ಇತಿಮಿತಿಗಳನ್ನೂ ನೆನಪಿಸಲಾಗಿದೆ.

ಇದು ಒಂದು ಸಾಮಾನ್ಯ ಗ್ರಂಥವಲ್ಲ. ಏಕೆಂದರೆ ಇದು ಯಾರಾದರೊಬ್ಬ ಸಾಮಾನ್ಯ ನಿಂದ ಅಥವಾ ಮನುಷ್ಯನಿಂದ ಬರೆಯಲ್ಪಟ್ಟ ಗ್ರಂಥವಲ್ಲ. ಇದು ಸಾಕ್ಷಾತ್ ವಿಶ್ವದೊಡೆಯ ನಿಂದ, ಸಕಲ ವಿಶ್ವಗಳ ಸೃಷ್ಟಿಕರ್ತನಿಂದ ಅವತರಿಸಲ್ಪಟ್ಟ, ಅವನ ಸಂದೇಶವಾಗಿದೆ. ಅದನ್ನು ಲಘುವಾಗಿ ಪರಿಗಣಿಸಬೇಡಿ. ಅದನ್ನು ಕಡೆಗಣಿಸಬೇಡಿ. ಇಂಥಾ ದಿವ್ಯ ಸಂದೇಶ ನಿಮ್ಮೆದುರು ಬಂದಾಗ ನೀವು ಅದನ್ನು ತಿರಸ್ಕರಿಸುವವರ ಸಾಲಿಗೆ ಸೇರಬೇಡಿ.

ನೀವೇನು ಸರ್ವತಂತ್ರ ಸ್ವತಂತ್ರರೆಂದು ಕೊಂಡಿರುವಿರಾ? ಅದೆಷ್ಟೋ ಮಂದಿ ರುಗ್ಣಶಯ್ಯೆಯಲ್ಲಿ ಸಾಯುವ ದೃಶ್ಯವನ್ನು ನೀವು ನೋಡುತ್ತೀರಿ. ಅವರ ಪ್ರಾಣ ಹೋಗುವುದನ್ನು ಅವರ ಹತ್ತಿರವೇ ನಿಂತು ವೀಕ್ಷಿಸುತ್ತೀರಿ. ಅವರ ಪ್ರಾಣವನ್ನು ಮರಳಿಸಲು, ಅವರನ್ನು ಮರಣದಿಂದ ರಕ್ಷಿಸಲು ನಿಮಗೆ ಸಾಧ್ಯವಾಗುವುದಿಲ್ಲ. ನೀವು ಅಸಹಾಯಕರಾಗಿರುತ್ತೀರಿ. ಹಾಗೆಯೇ ಮರಣದ ಆ ಅವಸ್ಥೆ ನಿಮಗೂ ಬರಲಿದೆ ಎಂಬುದು ನಿಮಗೆ ತಿಳಿದಿದೆ. ಹೀಗಿರುವಾಗ ಎಲ್ಲವನ್ನೂ ನಿಮ್ಮಿಷ್ಟದಂತೆ ಮಾಡಲು ನೀವು ಸ್ವತಂತ್ರರೆಂದು ಬಿಂಕ ಪಡುತ್ತೀರೇಕೆ?

ಖಂಡಿತವಾಗಿಯೂ ನೀವು ಸಂಪೂರ್ಣ ಸ್ವತಂತ್ರರಲ್ಲ. ನೀವು ದೇವನ ನಿಯಂತ್ರಣ ದಲ್ಲಿರುವವರು. ಅವನಿಚ್ಛಿಸಿದಾಗ ಹುಟ್ಟಿ ಅವನಿಚ್ಛಿಸಿದಾಗ ಸಾಯುವವರು. ಮತ್ತೆ ಅವನಿಚ್ಛಿಸಿ ದಾಗ ಅವನೆದುರು ನಿಮ್ಮ ಬದುಕಿನ ಬಗ್ಗೆ ವಿಚಾರಣೆ ಎದುರಿಸಬೇಕಾದವರು. ಆದುದರಿಂದ ನಿಮ್ಮ ನಿಯಂತ್ರಿತ ಸ್ವರೂಪವನ್ನು ಒಪ್ಪಿಕೊಳ್ಳಿ. ನಿಮ್ಮ ದಾಸ್ಯ ಮತ್ತು ಅವನ ಒಡೆತನವನ್ನು ಅಂಗೀಕರಿಸಿ, ಅವನ ಸಂದೇಶವನ್ನು ಸ್ವೀಕರಿಸಿ ಅದರ ಪ್ರಕಾರ ಬದುಕಲು ಪ್ರಯತ್ನಿಸಿ, ನಿಮ್ಮ ವಿಜಯ ಅಡಗಿರುವುದು ಅದರಲ್ಲೇ ಹೊರತು, ನಿರಾಕರಣೆಯಲ್ಲಿ ಅಲ್ಲ.

8

"ನಿಮ್ಮ ಪ್ರಭು ಹೀಗೆ ಹೇಳುತ್ತಾನೆ- ನನ್ನನ್ನು ಪ್ರಾರ್ಥಿಸಿರಿ. ನಾನು ನಿಮ್ಮ ಪ್ರಾರ್ಥನೆ ಗಳನ್ನು ಸ್ವೀಕರಿಸುವೆನು. ಅಹಂಕಾರಪಟ್ಟು ನನ್ನ ದಾಸ್ಯ ಮತ್ತು ಆರಾಧನೆಯಿಂದ ವಿಮುಖ ರಾಗುವವರು ಖಂಡಿತವಾಗಿಯೂ ಅಪಮಾನಿತರಾಗಿ ನರಕದಲ್ಲಿ ಪ್ರವೇಶಿಸುವರು. ನೀವು ವಿಶ್ರಾಂತಿ ಪಡೆಯಲೆಂದು ನಿಮಗಾಗಿ ರಾತ್ರಿಯನ್ನುಂಟು ಮಾಡಿದವನೂ ಹಗಲನ್ನು ಪ್ರಕಾಶ ಮಾನವಾಗಿ ಮಾಡಿದವನೂ ಅಲ್ಲಾಹನೇ ತಾನೆ. ವಾಸ್ತವದಲ್ಲಿ ಅಲ್ಲಾಹನು ಜನರ ಮೇಲೆ ಮಹಾ ಅನುಗ್ರಹ ತೋರುವವನಾಗಿರುತ್ತಾನೆ. ಆದರೆ ಹೆಚ್ಚಿನವರು ಕೃತಜ್ಞತೆ ಸಲ್ಲಿಸುವುದಿಲ್ಲ.

(ನಿಮಗಾಗಿ ಇಷ್ಟನ್ನೆಲ್ಲಾ ಮಾಡಿರುವ) ಅಲ್ಲಾಹನೇ ನಿಮ್ಮ ಪ್ರಭು. ಸಕಲ ವಸ್ತುಗಳ ಕರ್ತೃ. ಅವನ ಹೊರತು ಇನ್ನಾರೂ ಆರಾಧ್ಯರಿಲ್ಲ. ಹೀಗಿರುತ್ತಾ ಎಲ್ಲಿಂದ ನೀವು ದಾರಿಗೆಡಿಸ ಲ್ಪಡುತ್ತಿರುವಿರಿ? ಅಲ್ಲಾಹನ ವಚನಗಳನ್ನು ನಿರಾಕರಿಸುತ್ತಿದ್ದವರೆಲ್ಲರೂ ಇದೇ ರೀತಿಯಲ್ಲಿ ವಂಚಿಸಲ್ಪಡುತ್ತಿದ್ದರು. ಅಲ್ಲಾಹನೇ ಭೂಮಿಯನ್ನು ನಿಮ್ಮ ಪಾಲಿಗೆ ವಾಸಸ್ಥಾನವಾಗಿ ಮಾಡಿದವನು ಮತ್ತು ಮೇಲೆ ಆಕಾಶದ ಗುಂಬಜವನ್ನು ಮಾಡಿದವನು. ಅವನು ನಿಮಗೆ ರೂಪಕೊಟ್ಟನು. ಬಹಳ ಸುಂದರ ರೂಪವನ್ನೇ ಕೊಟ್ಟನು. ಅವನು ನಿಮಗೆ ಶುದ್ಧವಸ್ತು ಗಳಿಂದ ಆಹಾರ ನೀಡಿದನು. ಈ (ಕಾರ್ಯಗಳನ್ನು ಮಾಡಿರುವಂತಹ) ಅಲ್ಲಾಹನೇ ನಿಮ್ಮ ಪ್ರಭು. ಅಗಣಿತ ಸಮೃದ್ಧಿಯುಳ್ಳವನು, ಅವನು ಸಕಲ ಲೋಕಗಳ ಪ್ರಭು."

- ಅಲ್‌ಮೂಮಿನ್ : 60-64

ನನ್ನ ದಾಸರೇ! ನನ್ನನ್ನು ಕರೆಯಿರಿ. ಸಹಾಯವನ್ನು ನನ್ನಿಂದ ಕೇಳಿರಿ. ಅಭಯ ಮತ್ತು ರಕ್ಷಣೆಗಳನ್ನು ನನ್ನಿಂದ ಅಪೇಕ್ಷಿಸಿರಿ. ನಾನು ನಿಮ್ಮ ಕಣ್ಣೆದುರಿಗಿಲ್ಲದಿದ್ದರೂ ನಿಮ್ಮ ಕೂಗನ್ನು ಕೇಳುತ್ತೇನೆ. ನಿಮ್ಮ ಅಗತ್ಯಗಳನ್ನು ಈಡೇರಿಸುತ್ತೇನೆ. ಹಾಗಿರುವಾಗ ನನ್ನ ಹೊರತು ಯಾರ್ಯಾರನ್ನು ಸಂರಕ್ಷಕರೆಂದು ಭಾವಿಸಬೇಡಿ ಎಂದು ಇಲ್ಲಿ ಜಗದೊಡೆಯನು ತನ್ನ ದಾಸರಿಗೆ ಆದೇಶಿಸಿರುವನು. ತನ್ನ ಹಲವು ಉಪಕಾರಗಳನ್ನು ನೆನಪಿಸಿ, ಈ ಎಲ್ಲವನ್ನೂ ಕೊಡುವ ನನ್ನನ್ನು ಬಿಟ್ಟು, ದುರ್ಬಲ ವ್ಯಕ್ತಿ-ವಸ್ತುಗಳನ್ನು ಆಪದ್ಬಾಂಧವರೆಂದು ಪರಿಗಣಿಸಬೇಡಿರೆಂದು

ಇಲ್ಲಿ ಹೇಳಲಾಗಿದೆ. ಮನುಷ್ಯನು ತನ್ನ ಒಡೆಯನೂ ಸೃಷ್ಟಿಕರ್ತನೂ ತನ್ನ ಮೇಲೆ ಅಪಾರ ಅನುಗ್ರಹ ತೋರುವವನೂ ಪರಿಪಾಲಕನೂ ಆದ ಅಲ್ಲಾಹನಿಗೆ ಕೃತಜ್ಞನಾಗಿ ಬಾಳಬೇಕು. ಅಂತಹ ಕೃತಜ್ಞ ಹಾಗೂ ನಿಯಂತ್ರಿತ ಬದುಕೇ ಸಾರ್ಥಕ ಬದುಕು. ಇದಕ್ಕೆ ತದ್ವಿರುದ್ಧವಾಗಿ ಅಹಂಕಾರ ತೋರುವವರು ಮತ್ತು ತಮ್ಮ ಅಹಂಕಾರದ ಕಾರಣ, ದೇವನ ದಾಸ್ಯ ಸ್ವೀಕರಿಸಲು ನಿರಾಕರಿಸುವ ಕೃತಘ್ನರು ನರಕದ ಘೋರ ಶಿಕ್ಷೆಗೆ ತುತ್ತಾಗುವರು. ಯಾರ ಅನುಗ್ರಹಗಳು ನಿಮ್ಮ ಸುತ್ತಲೂ ತುಂಬಿವೆಯೋ ಅವನೊಬ್ಬನೇ ನಿಮ್ಮ ಕೃತಜ್ಞತೆ ಮತ್ತು ದಾಸ್ಯ - ಅನುಸರಣೆಗೆ ಅರ್ಹನಾಗಿರುವನು. ಅವನ ದಾಸ್ಯದ ಬಗ್ಗೆ ಸಂಕೋಚ ಪಡಬೇಡಿ. ಏಕೆಂದರೆ ಅವನಿಗೆ ಶರಣಾಗುವುದೇ ಸಾರ್ಥಕತೆಯ ಮಾರ್ಗ. ಉಳಿದೆಲ್ಲವೂ ಕೇವಲ ಅಲೆದಾಟಗಳು. ಇಲ್ಲಿ ದಾಸರಿಗೆ ಅಲ್ಲಲ್ಲಿ ಅಲೆಯುವ ಮತ್ತು ಅವರಿವರ ದಾಸ್ಯ ಮಾಡುವ ಬದಲು ನೈಜ ಒಡೆಯನ ದಾಸ್ಯ ಸ್ವೀಕರಿಸಲು ಹೇಳಲಾಗಿದೆ.

9

"ಅವನೇ ನಿಮ್ಮನ್ನು ಒಂದೇ ಜೀವದಿಂದ ಸೃಷ್ಟಿಸಿದನು. ತರುವಾಯ ಆ ಜೀವದಿಂದ ಅದರ ಜೊತೆಯನ್ನು ಸೃಷ್ಟಿಸಿದವನೂ ಅವನೇ ಮತ್ತು ನಿಮ್ಮ ಜಾನುವಾರುಗಳಿಂದ ನಿಮಗಾಗಿ ಎಂಟು ಗಂಡು-ಹೆಣ್ಣುಗಳನ್ನು ಒದಗಿಸಿದವನೂ ಅವನೇ. ಅವನು ನಿಮ್ಮ ಮಾತೆಯರ ಉದರಗಳೊಳಗೆ, ಮೂರು ಕತ್ತಲು ಪರದೆಗಳೊಳಗೆ (ನಿಮಗೆ) ಒಂದರ ನಂತರ ಒಂದು ರೂಪ ಕೊಡುತ್ತಾ ಸಾಗುತ್ತಾನೆ. (ಇವೆಲ್ಲ ಕಾರ್ಯಗಳನ್ನು ಮಾಡುತ್ತಿರುವ) ಈ ಅಲ್ಲಾಹನೇ ನಿಮ್ಮ ಪಾಲಕ ಪ್ರಭು. ಪ್ರಭುತ್ವವು ಅವನಿಗೇ ಸೇರಿದೆ. ಅವನ ಹೊರತು ಯಾವ ಆರಾಧ್ಯನೂ ಇಲ್ಲ. ಹೀಗಿರುತ್ತ ನೀವು ಅದೆಲ್ಲಿಂದ ದಾರಿಗೆಡಿಸಲ್ಪಡುತ್ತಿರುವಿರಿ? ನೀವು ಸತ್ಯವನ್ನು ನಿಷೇಧಿಸಿದರೆ, ಅಲ್ಲಾಹ್ ನಿಮ್ಮಿಂದ ನಿರಪೇಕ್ಷನಾಗಿದ್ದಾನೆ. ಆದರೆ ಅವನು ತನ್ನ ದಾಸರ ಪಾಲಿಗೆ ಸತ್ಯನಿಷೇಧವನ್ನು ಮೆಚ್ಚುವುದಿಲ್ಲ ಮತ್ತು ನೀವು ಕೃತಜ್ಞರಾದರೆ ಅದನ್ನು ಅವನು ನಿಮ್ಮ ಪಾಲಿಗೆ ಮೆಚ್ಚುತ್ತಾನೆ. ಹೊರೆ ಹೊರುವವನಾರೂ ಇನ್ನೊಬ್ಬನ ಹೊರೆಯನ್ನು ಹೊರಲಾರನು. ಕೊನೆಗೆ ನಿಮಗೆಲ್ಲರಿಗೂ ನಿಮ್ಮ ಪ್ರಭುವಿನ ಕಡೆಗೇ ಮರಳಲಿಕ್ಕಿದೆ. ನೀವು ಏನು ಮಾಡುತ್ತಿದ್ದಿರೆಂದು ಆಗ ಅವನು ನಿಮಗೆ ತೋರಿಸಿ ಬಿಡುವನು. ಅವನಂತು ಮನದೊಳಗಿನ ಸಂಗತಿಯನ್ನೂ ಬಲ್ಲವನಾಗಿರುತ್ತಾನೆ.

ಮನುಷ್ಯನಿಗೇನಾದರೂ ವಿಪತ್ತು ಬಂದೆರಗಿದಾಗ ಅವನು ತನ್ನ ಪ್ರಭುವಿನ ಕಡೆಗೆ ಮರಳಿ ಅವನನ್ನು ಪ್ರಾರ್ಥಿಸುತ್ತಾನೆ. ತರುವಾಯ ಅವನ ಪ್ರಭು ಅವನನ್ನು ತನ್ನ ಕೊಡುಗೆ ಯಿಂದ ಅನುಗ್ರಹಿಸಿದಾಗ ಅವನು, ಹಿಂದೆ ತಾನು ಯಾವ ಸಂಕಷ್ಟದ ಬಗ್ಗೆ ಪ್ರಾರ್ಥಿಸಿದ್ದನೋ ಅದನ್ನು ಮರೆತು ಬಿಡುತ್ತಾನೆ ಮತ್ತು ಅಲ್ಲಾಹನ ಮಾರ್ಗದಿಂದ ಭ್ರಷ್ಟಗೊಳಿಸಲಿಕ್ಕಾಗಿ ಇತರರನ್ನು ಅವನ ಸಮಾನರೆಂದು ಪರಿಗಣಿಸುತ್ತಾನೆ. (ಸಂದೇಶವಾಹಕರೇ) "ಸ್ವಲ್ಪ ಕಾಲ

ನಿನ್ನ ಸತ್ಯನಿಷೇಧವನ್ನು ಆಸ್ವಾದಿಸುತ್ತಿರು, ಖಂಡಿತ ವಾಗಿಯೂ ನೀನು ನರಕಕ್ಕೆ ಹೋಗುವವ ನಾಗಿರುವೆ"- ಎಂದು ಅವನೊಡನೆ ಹೇಳಿರಿ. (ಇವನ ನಿಲುಮೆ ಸರಿಯೋ ಅಥವಾ) ಆಜ್ಞಾಪಾಲಕನಾಗಿರುವ, ರಾತ್ರಿಯ ಜಾವಗಳಲ್ಲಿ (ನಮಾಝ್‌ಗೆ) ನಿಲ್ಲುವ, ಸಾಷ್ಟಾಂಗ ವೆರಗುವ, ಪರಲೋಕವನ್ನು ಭಯಪಡುವ ಮತ್ತು ತನ್ನ ಪ್ರಭುವಿನ ಕೃಪೆಯನ್ನು ನಿರೀಕ್ಷಿಸುವ ವ್ಯಕ್ತಿಯ (ನಿಲುಮೆ ಸರಿಯೋ)? ಜ್ಞಾನಿಗಳು ಮತ್ತು ಅಜ್ಞಾನಿಗಳು ಇವರಿಬ್ಬರೂ ಎಂದಾದರೂ ಸರಿಸಮಾನರಾಗಬಲ್ಲರೇ? ಎಂದು ಇವರೊಡನೆ ಕೇಳಿರಿ. ಬುದ್ಧಿಜೀವಿಗಳು ಮಾತ್ರ ಉಪದೇಶ ಸ್ವೀಕರಿಸುತ್ತಾರೆ." - ಅಝ್ಝುಮರ್: 6-9

ಮಾನವನು ಜಗತ್ತಿನ ಹಲವು ಅದ್ಭುತಗಳನ್ನು ಕಂಡು ಹುಬ್ಬೇರಿಸುತ್ತಿರುತ್ತಾನೆ. ಆದರೆ ಅವನು ಅದ್ಭುತಗಳಿಗಾಗಿ ಅಲ್ಲಲ್ಲಿ ಹುಡುಕುವ ಬದಲು ಸ್ವತಃ ತನ್ನ ಅಸ್ತಿತ್ವದ ಬಗ್ಗೆ ಚಿಂತನೆ ನಡೆಸಿದರೆ ಜಗತ್ತಿನ ಅತಿ ದೊಡ್ಡ ಅದ್ಭುತ ತನ್ನಲ್ಲೇ ಇದೆ ಎಂಬುದು ಅವನಿಗೆ ಮನವರಿಕೆಯಾದೀತು.

ಇಲ್ಲಿ ದೇವನು ಮನುಷ್ಯನ ಜನನದ ವಿವಿಧ ಅವಸ್ಥೆಗಳ ಬಗ್ಗೆ ಗಮನ ಸೆಳೆದಿರುವನು. ಉದರ, ಗರ್ಭ ಮತ್ತು ಪೊರೆ. ಹೀಗೆ 3 ಪದರಗಳೊಳಗೆ ಅಂಧಕಾರದಲ್ಲಿ ಹಂತಹಂತ ವಾಗಿ ವಿವಿಧ ರೂಪಾಂತರಗಳಿಗೆ ಒಳಗಾಗುತ್ತಾ ಮನುಷ್ಯ ಶರೀರ ರೂಪುಗೊಳ್ಳುತ್ತದೆ. ಈ ರೀತಿ ಅದ್ಭುತವಾಗಿ ನಿಮ್ಮನ್ನು ಸೃಷ್ಟಿಸಿದ ಅಲ್ಲಾಹನೇ ನಿಮ್ಮ ಒಡೆಯ. ಜಗತ್ತಿನ ನೈಜ ಆಧಿಪತ್ಯ ಅವನಿಗೇ ಸೇರಿದ್ದು. ಅವನನ್ನು ಬಿಟ್ಟು ನೀವು ಎಲ್ಲೆಲ್ಲಿ ಅಲೆಯುತ್ತಿರುವಿರಿ. ನೀವು ಅವನನ್ನು ನಿರಾಕರಿಸಿದರೆ ಅವನಿಗೇನೂ ನಷ್ಟವಿಲ್ಲ. ನೀವು ಅವನನ್ನು ಅನುಸರಿಸಬೇಕೆಂಬುದು ಅವನ ಅಗತ್ಯವಲ್ಲ. ಅದು ಶುದ್ಧವಾಗಿ, ನಿಮ್ಮದೇ ಅಗತ್ಯ. ಅದರಲ್ಲಿ ಹಿತವಿರುವುದೂ ನಿಮಗೇ. ನಿಮ್ಮ ಒಡೆಯನು ನಿರಾಕರಣೆ ಅಥವಾ ಸತ್ಯಧಿಕ್ಕಾರದ ನೀತಿಯನ್ನು ಮೆಚ್ಚುವುದಿಲ್ಲ. ಕೃತಜ್ಞಶೀಲ ದಾಸರನ್ನು ಅವನು ಮೆಚ್ಚುತ್ತಾನೆ. ನೀವು ಈ ಪೈಕಿ ಯಾವ ಧೋರಣೆ ತಾಳಿದರೂ ನಾಳೆ ಅದರ ಪರಿಣಾಮವನ್ನು ಎದುರಿಸಬೇಕಾಗುವುದು. ನಾಳೆ ನೀವು ಇಚ್ಛಿಸಿದರೂ-ಇಚ್ಛಿಸದಿದ್ದರೂ ಸೃಷ್ಟಿಕರ್ತನೆದುರು ನಿಮ್ಮನ್ನು ನಿಲ್ಲಿಸಲಾಗುವುದು. ಆ ದೇವನು ನಿಮ್ಮ ಎಲ್ಲ ಕರ್ಮ, ಎಲ್ಲ ಧೋರಣೆಗಳನ್ನು ಸೂಕ್ಷ್ಮಾತಿ ಸೂಕ್ಷ್ಮವಾಗಿ ತಿಳಿದಿರುವನು. ನೀವು ಜಗತ್ತಿನಲ್ಲಿ ಏನು ಮಾಡುತ್ತಲಿದ್ದೀರಿ ಎಂಬುದನ್ನು ಅವನೇ ನಿಮಗೆ ತಿಳಿಸುವನು. ಅನಂತರ, ನೀವು ಕೃತಜ್ಞರಾಗಿ ಬಾಳಿದವರು ಎಂದಾದರೆ ಅದರ ಸತ್ಫಲವನ್ನೂ ಕೃತಘ್ನರಾಗಿ ಬಾಳಿದ್ದರೆ ಅದರ ಶಿಕ್ಷೆಯನ್ನೂ ಎದುರಿಸಬೇಕಾಗುವುದು ಎಂದು ಇಲ್ಲಿ ಎಚ್ಚರಿಸಲಾಗಿದೆ.

ಜನರು ತಮಗೇನಾದರೂ ಆಪತ್ತು ಬಂದಾಗ ಅಥವಾ ವಿಶೇಷ ಸಂದರ್ಭಗಳಲ್ಲಿ ಆ ಒಬ್ಬ ನೈಜ ದೇವನನ್ನೇ ಸ್ಮರಿಸುತ್ತಾರೆ. ಆದರೆ ಸಂಕಷ್ಟ ನಿವಾರಣೆಯಾದ ಬಳಿಕ ಅವನನ್ನು ಮರೆತುಬಿಡುತ್ತಾರೆ. ಕೆಲವರು ಅವನ ಜೊತೆ ಇತರ ಹಲವರನ್ನು ದೇವರೆಂದು ಕಲ್ಪಿಸತೊಡಗುತ್ತಾರೆ. ಹೀಗೆ ಕೆಲವರು ಸ್ವಯಂ ದಾರಿ ತಪ್ಪುವವರಲ್ಲದೆ ಇತರರನ್ನೂ ದಾರಿ ತಪ್ಪಿಸಲು ಪ್ರಯತ್ನಿಸುತ್ತಾರೆ. ಇಲ್ಲಿ ಅಂತಹವರನ್ನು ಖಂಡಿಸಿ, ಕೇವಲ ಆಪತ್ತಿನಲ್ಲಿ

ಮಾತ್ರವಲ್ಲದೆ, ಎಲ್ಲ ಸ್ಥಿತಿಗಳಲ್ಲೂ ದೇವ ನಿಷ್ಠರಾಗಿರುವವರನ್ನು ಮತ್ತು ಹಗಲಿರುಳೆನ್ನದೆ ಅವನನ್ನು ಸ್ಮರಿಸುತ್ತಾ ಅವನಿಗೆ ಸಾಷ್ಟಾಂಗವೆರಗುತ್ತಾ ಸದಾ ಅವನ ಬಗ್ಗೆ ಆಶಾಭಾವವಿಟ್ಟು ಕೊಳ್ಳುವವರನ್ನು ಪ್ರಶಂಸಿಸಲಾಗಿದೆ.

ಕೊನೆಯಲ್ಲಿ, ಉಪದೇಶ ಸ್ವೀಕರಿಸಿ, ಕೃತಜ್ಞತೆ ಮತ್ತು ದೇವದಾಸ್ಯದ ನೀತಿ ಅನುಸರಿಸುವವರನ್ನು ಜ್ಞಾನಿ ಮತ್ತು ವಿವೇಕಿಗಳೆಂದು ವರ್ಣಿಸಲಾಗಿದೆ.

10

"ನಿಮ್ಮನ್ನು ನೆಲ-ಜಲಗಳಲ್ಲಿ ಅಲ್ಲಾಹನೇ ಚಲಾಯಿಸುತ್ತಾನೆ. ನೀವು ನಾವೆಗಳನ್ನೇರಿ ಅನುಕೂಲಕರ ಮಾರುತದೊಂದಿಗೆ ಆನಂದ ತುಂದಿಲರಾಗಿ ಪ್ರಯಾಣ ಮಾಡುತ್ತಿರುವಾಗ ಹಠಾತ್ತನೆ ಪ್ರತಿಕೂಲ ಮಾರುತವು ಬಲವಾಗಿ ಬೀಸಿ ಎಲ್ಲ ಕಡೆಗಳಿಂದಲೂ ತೆರೆಗಳು ಅಪ್ಪಳಿಸುತ್ತಿರುವಾಗ ಮತ್ತು ನಾವು ಚಂಡಮಾರುತದಿಂದ ಸುತ್ತುವರಿಯಲ್ಪಟ್ಟೆವೆಂದು ಪ್ರಯಾಣಿಕರು ಮನಗಾಣುತ್ತಿರುವಾಗ ಎಲ್ಲರೂ ತಮ್ಮ ಧರ್ಮವನ್ನು ಅಲ್ಲಾಹನಿಗೆ ಮಾತ್ರ ಮೀಸಲಾಗಿರಿಸಿಕೊಂಡು ಅವನೊಡನೆ, "ನೀನು ಈ ಗಂಡಾಂತರದಿಂದ ನಮ್ಮನ್ನು ಪಾರುಗಾಣಿಸಿದರೆ ನಾವು ಕೃತಜ್ಞದಾಸರಾಗುವೆವು" ಎಂದು ಪ್ರಾರ್ಥಿಸುತ್ತಾರೆ. ಆದರೆ, ಅವನು ಅವರನ್ನು ರಕ್ಷಿಸಿದಾಗ ಮತ್ತೆ ಅದೇ ಜನರು ಸತ್ಯದಿಂದ ವಿಮುಖರಾಗಿ ಭೂಮಿಯಲ್ಲಿ ಬಂಡಾಯವೇಳುತ್ತಾರೆ. ಜನರೇ, ನಿಮ್ಮ ಈ ಬಂಡಾಯವು ನಿಮ್ಮ ವಿರುದ್ಧವೇ ತಿರುಗಿ ಬೀಳುತ್ತದೆ. ಐಹಿಕ ಜೀವನವು ಕೇವಲ ಕೆಲವೇ ದಿನಗಳ ಸುಖಾನಂದ, ಅದನ್ನೀಗ (ಅನುಭವಿಸಿ ಕೊಳ್ಳಿರಿ) ಅನಂತರ ನಿಮಗೆ ನಮ್ಮ ಕಡೆಗೆ ಮರಳಿ ಬರಲಿಕ್ಕಿದೆ. ನೀವು ಏನು ಮಾಡುತ್ತಿದ್ದಿ ರೆಂಬುದನ್ನು ಆಗ ನಾವು ನಿಮಗೆ ತಿಳಿಸುವೆವು.

ನೀವು ನಮ್ಮ ದೃಷ್ಟಾಂತಗಳನ್ನು ಕಡೆಗಣಿಸಲು ಯಾವ ಜೀವನದ ಮದೋನ್ಮತ್ತತೆಯು ಕಾರಣವಾಗಿರುತ್ತದೋ ಆ ಐಹಿಕ ಜೀವನದ ಉದಾಹರಣೆಯು ಹೀಗಿದೆ: - ನಾವು ಆಕಾಶದಿಂದ ಮಳೆಗರೆದೆವು. ಆಗ ಜನರೂ ಜಾನುವಾರುಗಳೂ ತಿನ್ನುವ ಬೆಳೆಯು ಹುಲುಸಾಗಿ ಬೆಳೆಯಿತು. ಭೂಮಿಯು ಸಸ್ಯಶ್ಯಾಮಲವಾಗಿದ್ದು ಹೊಲಗದ್ದೆಗಳು ಬೆಳೆ ತುಂಬಿ ನಿಂತಿದ್ದುವು ಹಾಗೂ ಅವುಗಳ ಮಾಲಿಕರು ನಾವೀಗ ಇದರಿಂದ ಫಲ ಹೊಂದಲು ಸಮರ್ಥರಾಗಿದ್ದೇ ವೆಂದು ಭಾವಿಸುತ್ತಿದ್ದರು. ಆಗ ಹಠಾತ್ತನೆ ರಾತ್ರೆ ಅಥವಾ ಹಗಲಲ್ಲಿ ನಮ್ಮ ಅಪ್ಪಣೆ ಬಂದು ಬಿಟ್ಟಿತು ಮತ್ತು ನಿನ್ನೆ ಅಲ್ಲೇನೂ ಇರಲೇ ಇಲ್ಲವೋ ಎಂಬಂತೆ ನಾವು ಅದನ್ನು ಅಳಿಸಿ ಬಿಟ್ಟೆವು. ವಿವೇಚಿಸುವ ಜನರಿಗೆ ನಾವು ಈ ರೀತಿಯಲ್ಲಿ ದೃಷ್ಟಾಂತಗಳನ್ನು ಸುಸ್ಪಷ್ಟವಾಗಿ ಮುಂದಿರಿಸುತ್ತೇವೆ. (ನೀವು ಈ ಅಸ್ಥಿರ ಜೀವನದ ಮಾಯೆಯಲ್ಲಿ ಸಿಕ್ಕಿ ಬೀಳುತ್ತಿರುವಿರಿ)

ಅಲ್ಲಾಹ್ ನಿಮ್ಮನ್ನು 'ದಾರುಸ್ಸಲಾಮ್'ನ (ಶಾಂತಿ ಗೃಹದ) ಕಡೆಗೆ ಕರೆಯುತ್ತಿದ್ದಾನೆ. (ಸನ್ಮಾರ್ಗದರ್ಶನವು ಅವನ ಅಂಕೆಯಲ್ಲಿದೆ) ಅವನು ತನಗಿಷ್ಟ ಬಂದವರಿಗೆ ಸನ್ಮಾರ್ಗ ದರ್ಶನ ಮಾಡಿಸುತ್ತಾನೆ. ಒಳಿತಿನ ಮಾರ್ಗ ಹಿಡಿದವರಿಗೆ ಒಳಿತಿದೆ. ಇನ್ನೂ ಹೆಚ್ಚಿನ ಅನುಗ್ರಹವಿದೆ. ಅವರ ಮುಖಕ್ಕೆ ಕಳಂಕವಾಗಲೀ, ಅವರಿಗೆ ಅವಮಾನವಾಗಲೀ ಆಗದು. ಅವರು ಸ್ವರ್ಗಕ್ಕೆ ಹಕ್ಕುದಾರರು. ಅಲ್ಲಿ ಅವರು ಸದಾ ಕಾಲ ವಾಸಿಸುವರು.

ಪಾಪ ಗಳಿಸಿದವರು ಅವರ ಪಾಪಗಳಿಗೆ ತಕ್ಕಂತೆ ಪ್ರತಿಫಲ ಪಡೆಯುವರು. ಅವಮಾನವು ಅವರನ್ನಾವರಿಸುವುದು. ಅವರನ್ನು ಅಲ್ಲಾಹನಿಂದ ರಕ್ಷಿಸುವವನಾರೂ ಇರಲಾರನು. ಅವರ ಮುಖಗಳ ಮೇಲೆ ನಿಶಾಂಧಕಾರದ ಕಪ್ಪು ಪರದೆಗಳು ಬಿದ್ದಿರುವಂತೆ ಕತ್ತಲೆ ಕವಿದಿರುವುದು. ಅವರು ನರಕಕ್ಕೇ ಹಕ್ಕುದಾರರು. ಅದರಲ್ಲಿ ಅವರು ಸದಾಕಾಲ ವಾಸಿಸುವರು. ನಾವು ಅವರೆಲ್ಲರನ್ನೂ ಒಟ್ಟಾಗಿ (ನಮ್ಮ ನ್ಯಾಯಾಲಯದಲ್ಲಿ) ಸೇರಿಸುವ ದಿನ, ಬಹುದೇವಾರಾಧನೆ ಮಾಡಿದವರೊಡನೆ, ನೀವೂ (ದೇವತ್ವದಲ್ಲಿ) ನೀವು ಮಾಡಿಕೊಂಡ ಸಹಭಾಗಿಗಳೂ ನಿಲ್ಲಿರೆಂದು ಹೇಳುವೆವು. ಆ ಬಳಿಕ ನಾವು ಅವರ ನಡುವಿನಿಂದ ಪರಕೀಯತೆಯ ಪರದೆಯನ್ನು ಸರಿಸಿಬಿಡುವೆವು. ಅವರು ಮಾಡಿಕೊಂಡ ಸಹಭಾಗಿಗಳು ಹೇಳುವರು,- "ನೀವು ನಮ್ಮ ದಾಸ್ಯ-ಆರಾಧನೆಯನ್ನಂತೂ ಮಾಡುತ್ತಿರಲಿಲ್ಲ. (ನೀವು ನಮ್ಮನ್ನು ಆರಾಧಿಸುತ್ತಿದ್ದರೂ) ನಾವು ನಿಮ್ಮ ದಾಸ್ಯ-ಆರಾಧನೆಯ ಬಗ್ಗೆ ಸಂಪೂರ್ಣ ಅಜ್ಞರಾಗಿದ್ದೇವೆಂಬುದಕ್ಕೆ ನಮ್ಮ ಮತ್ತು ನಿಮ್ಮ ನಡುವೆ ಅಲ್ಲಾಹನ ಸಾಕ್ಷ್ಯ ಸಾಕು." ಆಗ ಪ್ರತಿಯೊಬ್ಬನು ತಾನು ಮಾಡಿದ ಕರ್ಮದ ಸವಿಯನ್ನುಣ್ಣುವನು. ಎಲ್ಲರೂ ತಮ್ಮ ನೈಜ ಒಡೆಯನಾದ ಅಲ್ಲಾಹನ ಕಡೆಗೆ ತಿರುಗಿಸಲ್ಪಡುವರು ಮತ್ತು ಅವರು ಸೃಷ್ಟಿಸಿಕೊಂಡ ಎಲ್ಲ ಸುಳ್ಳುಗಳೂ ಮಾಯವಾಗುವುವು."

- ಯೂನುಸ್ : 22-30

ಆಪತ್ತಿನಲ್ಲಿ ದೇವನನ್ನು ಸ್ಮರಿಸಿ, ಆಪತ್ತು ದೂರವಾದಾಗ ದೇವನನ್ನು ಮರೆತು, ವಿದ್ರೋಹವೆಸಗುವ ಮನುಷ್ಯರ ಬಗ್ಗೆ ಇಲ್ಲಿ ಇನ್ನೊಂದು ಉದಾಹರಣೆಯನ್ನು ಕೊಡಲಾಗಿದೆ. ಮನುಷ್ಯರೇ! ಈ ರೀತಿಯ ದ್ವಂದ್ವ ನೀತಿಯನ್ನು ಏಕೆ ಅನುಸರಿಸುತ್ತಿರುವಿರಿ? ಇದರಿಂದ ಏನೂ ಹಾನಿಯಿಲ್ಲವೆಂದು ಭಾವಿಸಿರುವಿರಾ? ಖಂಡಿತ ತಪ್ಪು. ಈ ವಿದ್ರೋಹದ ಕಹಿ ಫಲವನ್ನು ನೀವೇ ಅನುಭವಿಸಬೇಕಾಗುವುದು. ನೀವು ಈ ಜೀವನವೇ ಶಾಶ್ವತವೆಂದೂ ನಿಮ್ಮ ವಿದ್ರೋಹಗಳ ಪರಿಣಾಮ ಎದುರಿಸಬೇಕಾದ ಲೋಕವೊಂದು ಇಲ್ಲವೆಂದೂ ಭ್ರಮಿಸುತ್ತಿರಬಹುದು. ಆದರೆ ನಿಜವಾಗಿ ಈ ಜೀವನ ಬಹಳ ತಾತ್ಕಾಲಿಕ. ಹೊಲದಲ್ಲಿ ಫಸಲು ತುಂಬಿ ಬೆಳೆದು ನಿಂತ ಬೆಳೆಯನ್ನು ಕಂಡು ಜನರು ಆನಂದಿಸುತ್ತಾರೆ, ಹೆಮ್ಮೆ ಪಡುತ್ತಾರೆ. ಆದರೆ ಕೆಲವೇ ದಿನದಲ್ಲಿ ಆ ಬೆಳೆ ಕೊಯ್ಯಲ್ಪಟ್ಟು ಹೊಲವು ಮತ್ತೆ ಬಯಲಾಗಿ ಬಿಡುವುದಿಲ್ಲವೇ? ಅದೇ ರೀತಿ ಭೂಮಿಯಲ್ಲಿ ಮೆರೆಯುವ ಮನುಷ್ಯನ ಆಯುಷ್ಯವೂ ಯಾವ ಕ್ಷಣದಲ್ಲೂ ಕೊನೆಗೊಳ್ಳಬಹುದು. ಭೂಮಿಯಲ್ಲಿ ವಾಸಿಸಲು ಅವನಿಗೆ ಕೊಡಲಾದ ಪರೀಕ್ಷಾವಧಿ ಮುಗಿದು ಮರಣದ ಮೂಲಕ ಅವನು ತನ್ನ ಪರಲೋಕ ಪ್ರಯಾಣ ಆರಂಭಿಸಲು ನಿರ್ಬಂಧಿತನಾಗಬಹುದು ಎಂದು ದೇವನು ಮೇಲಿನ ವಾಕ್ಯಗಳಲ್ಲಿ ಹೇಳಿರುವನು. ಈ ತಾತ್ಕಾಲಿಕ ಜೀವನದಲ್ಲಿ;

ಅಹಂಕಾರ ತೋರದೆ, ದೇವ ಮಾರ್ಗದರ್ಶನವನ್ನು ಅನುಸರಿಸುತ್ತಾ ಸನ್ಮಾರ್ಗದಲ್ಲಿ ನಡೆದವರು ಅಂತಿಮವಾಗಿ ಸ್ವರ್ಗದ ಶಾಶ್ವತ ಸುಖ ಪಡೆಯುವರೆಂಬ ಆಶ್ವಾಸನೆಯನ್ನೂ ಈ ವಾಕ್ಯ ಗಳಲ್ಲಿ ಕಾಣಬಹುದು. ಅದೇ ವೇಳೆ ದುಷ್ಟರಿಗೆ, ತಮ್ಮ ದುಷ್ಟತನದ ಪರಿಣಾಮವನ್ನು ಎದುರಿಸಲೇ ಬೇಕಾಗುವುದೆಂಬ ಎಚ್ಚರಿಕೆಯನ್ನು ದೇವನು ಕೊಟ್ಟಿರುವನು.

ಇಂದು ಮಾನವನು ತನ್ನ ನೈಜ ಸೃಷ್ಟಿಕರ್ತನನ್ನು ಬಿಟ್ಟು ಯಾವೆಲ್ಲಾ ವ್ಯಕ್ತಿ-ಅಥವಾ ವಸ್ತುಗಳನ್ನು ದೇವರೆಂದು ಭ್ರಮಿಸಿ ಪೂಜಿಸುತ್ತಿರುವನೋ ಅವರಾರೂ ಮರಣಾ ನಂತರದ ಆ ನಿರ್ಣಾಯಕ ದಿನ ಅವರಿಗೆ ಸಹಾಯ ಮಾಡಲಾರರು. ಅವರು ತಮ್ಮ ಭಕ್ತರನ್ನು ನರಕಾಗ್ನಿಯಿಂದ ರಕ್ಷಿಸುವುದಂತಿರಲಿ, ಸ್ವತಃ ತಮ್ಮ ಭವಿಷ್ಯದ ಬಗ್ಗೆಯೇ ಚಿಂತಿತರಾಗಿ ರುವರು. ಮಾತ್ರವಲ್ಲ ಅವರು ತಮಗೂ ಈ ಭಕ್ತರಿಗೂ ಯಾವುದೇ ಸಂಬಂಧ ಇಲ್ಲವೆಂದೂ ತಮ್ಮನ್ನು ಆರಾಧಿಸಬೇಕೆಂದು ತಾವೇನೂ ಹೇಳಿರಲಿಲ್ಲವೆಂದೂ ಇತರರು ತಮ್ಮನ್ನು ಆರಾಧಿಸುವ ವಿಷಯ ತಮಗೆ ತಿಳಿದೇ ಇಲ್ಲವೆಂದೂ ಹೇಳಿಬಿಡುವರು. ಹಾಗಿರುವಾಗ ಅಂಥವರನ್ನು ಆರಾಧಿಸಿ ಮೋಸ ಹೋಗದಿರಿ. ನಿಜವಾದ ಒಡೆಯನಾದ ಏಕದೇವನನ್ನು ಮಾತ್ರ ಪೂಜಿಸಿ, ಆತನಿಗೆ ಶರಣಾಗಿ ಬದುಕಿರೆಂದು ಪವಿತ್ರ ಕುರ್‌ಆನ್ ಕರೆ ಕೊಡುತ್ತದೆ.

11

"ಅವರೊಡನೆ ಕೇಳಿರಿ- ನಿಮಗೆ ಆಕಾಶಗಳಿಂದಲೂ ಭೂಮಿಯಿಂದಲೂ ಜೀವನಾಧಾರ ನೀಡುತ್ತಿರುವವನಾರು? ಈ ಶ್ರವಣ ಮತ್ತು ದೃಕ್ಶಕ್ತಿಗಳು ಯಾರ ವಶದಲ್ಲಿವೆ? ನಿರ್ಜೀವಿ ಯಿಂದ ಸಜೀವಿಯನ್ನು, ಸಜೀವಿಯಿಂದ ನಿರ್ಜೀವಿಯನ್ನೂ ಹೊರತರುವವನಾರು? ಈ ಜಗತ್ತಿನ ವ್ಯವಸ್ಥೆಯನ್ನು ಶಿಸ್ತುಬದ್ಧವಾಗಿ ನಡೆಸುತ್ತಿರುವವನಾರು? 'ಅಲ್ಲಾಹ್' ಎಂದೇ ಅವರು ಹೇಳುವರು. ಹೇಳಿರಿ- "ಹಾಗಿದ್ದರೂ ನೀವು (ಪರಮಾರ್ಥಕ್ಕೆ ವಿರುದ್ಧವಾಗಿ ನಡೆಯು ವುದನ್ನು) ತೊರೆಯುವುದಿಲ್ಲವೇ? ನಿಜವಾಗಿ ಈ ಅಲ್ಲಾಹನೇ ನಿಮ್ಮ ಯಥಾರ್ಥ ಪ್ರಭು. ಇನ್ನು ಸತ್ಯದ ತರುವಾಯ ಪಥಭ್ರಷ್ಟತೆಯ ವಿನಾ ಬೇರೇನು ಉಳಿದಿದೆ? ನೀವೆತ್ತ ಅಲೆದಾಡಿಸಲ್ಪಡುತ್ತಿರುವಿರಿ? ಹೀಗೆ, ಕರ್ಮಭ್ರಷ್ಟರು ವಿಶ್ವಾಸವಿರಿಸಲಾರರೆಂದು ನಿಮ್ಮ ಪ್ರಭು ಹೇಳಿದ ಮಾತು ನಿಜವಾಯಿತು.

"ನೀವಿರಿಸಿಕೊಂಡಿರುವ ಸಹಭಾಗಿಗಳ ಪೈಕಿ ಸೃಷ್ಟಿಯ ಆರಂಭ ಮಾಡುವವನೂ ಅದನ್ನು ಪುನರಾವರ್ತಿಸುವವನೂ ಯಾರಾದರೂ ಇದ್ದಾನೆಯೇ?" ಎಂದು ಇವರೊಡನೆ ಕೇಳಿರಿ. ಹೇಳಿರಿ- "ಸೃಷ್ಟಿಯನ್ನು ಆರಂಭಿಸುವವನೂ ಅದನ್ನು ಪುನರಾವರ್ತಿಸುವವನೂ ಕೇವಲ ಅಲ್ಲಾಹನೇ. ಹೀಗಿರುತ್ತ ನೀವು ಇದಾವ ತದ್ವಿರುದ್ಧ ಮಾರ್ಗದಲ್ಲಿ ನಡೆಸಲ್ಪಡುತ್ತಿರುವಿರಿ?" "ನೀವಿರಿಸಿಕೊಂಡಿರುವ ಸಹಭಾಗಿಗಳ ಪೈಕಿ ಯಾರಾದರೂ ಸತ್ಯದ ಕಡೆಗೆ ಮಾರ್ಗದರ್ಶನ

ನೀಡುವವನೂ ಇದ್ದಾನೆಯೇ?" ಎಂದು ಇವರೊಡನೆ ಕೇಳಿರಿ. ಹೇಳಿರಿ- "ಸತ್ಯದ ಕಡೆಗೆ ಮಾರ್ಗದರ್ಶನ ಮಾಡುವವನು ಕೇವಲ ಅಲ್ಲಾಹನೇ. ಹೀಗಿರುತ್ತ ಸತ್ಯದ ಕಡೆಗೆ ಮಾರ್ಗದರ್ಶನ ಮಾಡುವವನು ಅನುಸರಣೆಗೆ ಹೆಚ್ಚು ಅರ್ಹನೋ ಅಥವಾ ತನಗೆ ಮಾರ್ಗದರ್ಶನ ಮಾಡಿಸ ದಿದ್ದರೆ ಸ್ವತಃ ಸನ್ಮಾರ್ಗ ಹೊಂದದವನು ಅನುಸರಣೆಗೆ ಹೆಚ್ಚು ಅರ್ಹನೋ? ನಿಮಗೇನಾಗಿ ಬಿಟ್ಟಿದೆ? ನೀವೆಂತಹ ತದ್ವಿರುದ್ಧ ತೀರ್ಮಾನ ಕೈಗೊಳ್ಳುತ್ತೀರಿ?" ವಾಸ್ತವದಲ್ಲಿ ಅವರ ಪೈಕಿ ಹೆಚ್ಚಿನವರು ಊಹೆ ಮತ್ತು ಗುಮಾನಿಗಳನ್ನು ಮಾತ್ರ ಹಿಂಬಾಲಿಸುತ್ತಾರೆ. ವಸ್ತುತಃ ಗುಮಾನಿಯು ಸತ್ಯದ ಅವಶ್ಯಕತೆಯನ್ನು ಎಷ್ಟಕ್ಕೂ ಪೂರೈಸುವುದಿಲ್ಲ. ಇವರು ಮಾಡುತ್ತಿರು ವುದನ್ನೆಲ್ಲಾ ಅಲ್ಲಾಹನು ಚೆನ್ನಾಗಿ ಅರಿಯುತ್ತಾನೆ. - ಯೂನುಸ್ : 31-36.

ದಿವ್ಯ ಸಂದೇಶವಾಗಿರುವ ಪವಿತ್ರ ಕುರ್‌ಆನಿನ ಈ ವಾಕ್ಯಗಳಲ್ಲಿಯೂ ಅಲ್ಲಾಹನು ಮಾನವನೊಡನೆ, ಆತನಿಗೆ ಬಹಳ ನಿಕಟವಾಗಿರುವ ಕೆಲವು ಅನುಗ್ರಹಗಳ ಬಗ್ಗೆ ಪ್ರಶ್ನಿಸಿ ರುವನು. ಮನುಷ್ಯ ನಿತ್ಯ ಸೇವಿಸುವ ಆಹಾರದ ಬಗ್ಗೆ ಗಮನ ಸೆಳೆದು, ಭೂಮಿ ಮತ್ತು ಆಕಾಶಗಳಿಂದ ನಿಮಗೆ ಆಹಾರವೊದಗಿಸುವವನು ಯಾರು? ಕಣ್ಣು-ಕಿವಿಗಳ ದಾತನಾರು, ಜೀವದಿಂದ ನಿರ್ಜೀವವನ್ನೂ ನಿರ್ಜೀವದಿಂದ ಜೀವವನ್ನೂ ಸೃಷ್ಟಿಸಬಲ್ಲ ಸರ್ವಶಕ್ತ ಯಾರು? ಇವೆಲ್ಲಾ ಅಲ್ಲಾಹನೊಬ್ಬನಿಗೆ ಅಂದರೆ ನೈಜ ಏಕದೇವನಿಗೆ ಮಾತ್ರ ಸಾಧ್ಯವೆಂದು ಬಹು ದೇವಾರಾಧಕರೂ ಒಪ್ಪುತ್ತಾರೆ. ಹಾಗಿರುವಾಗ ಅವರು ಮತ್ತೇಕೆ ಆ ಏಕದೇವನನ್ನು ಭಯ ಪಡುವುದಿಲ್ಲ. ಅವನನ್ನು ಬಿಟ್ಟು, ಇಲ್ಲದ್ದನ್ನು ಸೃಷ್ಟಿಸುವ ಶಕ್ತಿಯಾಗಲೀ ಸೃಷ್ಟಿಯನ್ನು ಪುನರಾವರ್ತಿಸುವ ಸಾಮರ್ಥ್ಯವಾಗಲೀ ಇಲ್ಲದ ತೀರಾ ಸಾಮಾನ್ಯ ಅಥವಾ ಕೇವಲ ಕಾಲ್ಪನಿಕ ವಸ್ತುಗಳ ಭಕ್ತರಾಗಿರುವುದೇಕೆ?

ಇಲ್ಲಿ ನೈಜ ಆರಾಧ್ಯನಾದ ಅಲ್ಲಾಹನಿಗೂ ಮಿಥ್ಯ ಆರಾಧ್ಯ ವಸ್ತುಗಳಿಗೂ ಇರುವ ಇನ್ನೊಂದು ಸ್ಪಷ್ಟ ವ್ಯತ್ಯಾಸದ ಕಡೆಗೆ ಜನರ ಗಮನ ಸೆಳೆಯಲಾಗಿದೆ. ನಿಜವಾದ ದೇವನು ತನ್ನ ದಾಸರ ಮಾರ್ಗದರ್ಶನಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡುತ್ತಾನೆ. ಅವನು ಪ್ರವಾದಿಗಳನ್ನು ಕಳುಹಿಸಿ, ಗ್ರಂಥಗಳನ್ನು ಅವತರಿಸಿ, ಯಾವುದು ಸನ್ಮಾರ್ಗ ಎಂಬುದನ್ನು ಜನರಿಗೆ ತೋರಿಸಿ ಕೊಡುತ್ತಾನೆ. ಅವನ ಹೊರತು, ನೀವು ಆರಾಧಿಸುವ ಇತರ ವಸ್ತುಗಳು ಈ ರೀತಿ ಸನ್ಮಾರ್ಗದರ್ಶನ ಮಾಡಿಸುತ್ತವೆಯೇ? ಯಾವ ಮಾರ್ಗದಲ್ಲಿ ನಡೆದರೂ ಕೊನೆಗೆ ನಾವೇ ಗೆಲ್ಲುವೆವೆಂದು ನೀವು ಭಾವಿಸಿದ್ದರೆ ಅದು ತಪ್ಪು. ವಿಜಯಕ್ಕೆ ಇರುವ ಮಾರ್ಗ ಒಂದೇ. ಅದುವೇ ಸತ್ಯದ ಮಾರ್ಗ. ಅದೊಂದನ್ನು ಬಿಟ್ಟರೆ ಉಳಿದೆಲ್ಲವೂ ದುರ್ಮಾರ್ಗಗಳು. ಸತ್ಯವನ್ನು ಬಿಟ್ಟರೆ ಮತ್ತೆ ಉಳಿಯುವುದು ಪಥಭ್ರಷ್ಟತೆ ಮಾತ್ರ. ಹಾಗಿರುವಾಗ ಬಹುದೇವಾರಾಧನೆಯೂ ಸನ್ಮಾರ್ಗವೇ ಎಂದು ಭ್ರಮಿಸಬೇಡಿ ಎಂದು ತಿಳಿಸಲಾಗಿದೆ.

ಸತ್ಯ ಯಾವುದು, ಮಿಥ್ಯ ಯಾವುದು ಎಂಬುದನ್ನು ಮನುಷ್ಯನು ವಾಸ್ತವಿಕ ಜ್ಞಾನದ ಆಧಾರದಲ್ಲೇ ತೀರ್ಮಾನಿಸಬೇಕು. ಆದರೆ ಹೆಚ್ಚಿನ ಮಾನವರು ದಾರಿತಪ್ಪಲು ಕಾರಣವೇನೆಂದರೆ ಅವರು ಜ್ಞಾನದ ಬದಲು ತಮ್ಮ ಊಹೆ ಮತ್ತು ಭ್ರಮೆಗಳ ಆಧಾರದಲ್ಲೇ ಮುಂದುವರಿಯಲು

ಪ್ರಯತ್ನಿಸುತ್ತಾರೆ. ಸನ್ಮಾರ್ಗ ಸಿಗಲು ಜ್ಞಾನದ ಬೆಳಕು ಬಹಳ ಅಗತ್ಯ. ಊಹೆಗಳು ಮನುಷ್ಯನನ್ನು ಎಲ್ಲೆಲ್ಲೋ ಅಲೆದಾಡಿಸುತ್ತಲೇ ಇರುತ್ತವೆ. ಆದ್ದರಿಂದ ಊಹೆಗಳ ಬದಲು ಆಧಾರ ಸಹಿತ ಜ್ಞಾನವನ್ನು ಅವಲಂಬಿಸಬೇಕೆಂದು ಈ ವಾಕ್ಯಗಳಲ್ಲಿ ಸೂಚಿಸಲಾಗಿದೆ.

---

(12)

"ನೀವು ನೋಡುತ್ತಿಲ್ಲವೇ? ಅಲ್ಲಾಹನು ಆಕಾಶದಿಂದ ನೀರು ಸುರಿಸಿದನು. ಅನಂತರ ಅದನ್ನು ಚಿಲುಮೆ ಮತ್ತು ನದಿಗಳ ರೂಪದಲ್ಲಿ ಭೂಮಿಯೊಳಗೆ ಹರಿಸಿದನು. ತರುವಾಯ ಆ ನೀರಿನ ಮೂಲಕ ಅವನು ವಿವಿಧ ಜಾತಿಯ ವಿಭಿನ್ನ ಬೆಳೆಗಳನ್ನು ಹೊರ ತೆಗೆಯುತ್ತಾನೆ. ಅನಂತರ ಆ ಬೆಳೆಗಳು ಹಣ್ಣಾಗಿ ಒಣಗುತ್ತವೆ. ಆಗ ಅವು ಹಳದಿಯಾಗಿ ಬಿಡುವುದನ್ನು ನೀವು ನೋಡುತ್ತೀರಿ. ಕೊನೆಗೆ ಅಲ್ಲಾಹನು ಅವುಗಳನ್ನು ಹೊಟ್ಟಾಗಿ ಮಾಡಿ ಬಿಡುತ್ತಾನೆ. ವಾಸ್ತವದಲ್ಲಿ ಇದರಲ್ಲಿ ಬುದ್ಧಿಜೀವಿಗಳಿಗೆ ಒಂದು ಪಾಠವಿದೆ. ಅಲ್ಲಾಹನು ಯಾರ ಹೃದಯವನ್ನು ಇಸ್ಲಾಮಿಗಾಗಿ ತೆರೆದುಬಿಟ್ಟನೋ ಹಾಗೂ ಯಾರು ತನ್ನ ಪ್ರಭುವಿನ ಕಡೆಯಿಂದ ಒಂದು ಪ್ರಕಾಶದಲ್ಲಿ ನಡೆಯುತ್ತಿರುವನೋ ಅವನು (ಇವುಗಳಿಂದ ಯಾವ ಪಾಠವನ್ನೂ ಕಲಿಯದವನಂತೆ ಆಗಬಲ್ಲನೇ?) ಯಾರ ಹೃದಯಗಳು ಅಲ್ಲಾಹನ ಬೋಧನೆ ಯಿಂದ ಇನ್ನಷ್ಟು ಕಠಿಣವಾಗಿ ಹೋದುವೋ ಅವರಿಗಾಗಿ ವಿನಾಶವಿದೆ. ಅವರು ಸುವ್ಯಕ್ತ ಪಥಭ್ರಷ್ಟತೆಯಲ್ಲಿ ಬಿದ್ದಿರುತ್ತಾರೆ.

ಅಲ್ಲಾಹನು ಅತ್ಯುತ್ತಮ ವಾಣಿಯನ್ನು ಅವತರಿಸಿರುವನು. ಎಲ್ಲ ಭಾಗಗಳೂ ಸಮಾನ ಸ್ವರೂಪವಾಗಿರುವಂತಹ ಗ್ರಂಥವಿದು. ಇದರಲ್ಲಿ ವಿಷಯಗಳು ಪುನರಾವರ್ತಿಸಲ್ಪಟ್ಟಿವೆ. ಇದನ್ನು ಕೇಳಿದಾಗ, ತಮ್ಮ ಪ್ರಭುವನ್ನು ಭಯಪಡುವವರಿಗೆ ರೋಮಾಂಚನವಾಗುತ್ತದೆ ಮತ್ತು ಅವರ ಶರೀರ ಹಾಗೂ ಹೃದಯಗಳು ಮೃದುವಾಗಿ ಅಲ್ಲಾಹನ ಸ್ಮರಣೆಯ ಕಡೆಗೆ ವಾಲಿ ಬಿಡುತ್ತವೆ. ಇದು ಅಲ್ಲಾಹನ ಮಾರ್ಗದರ್ಶನ. ಇದರ ಮೂಲಕ ಅವನು ತಾನಿಚ್ಛಿಸಿ ದವರನ್ನು ಸನ್ಮಾರ್ಗಕ್ಕೆ ತರುತ್ತಾನೆ ಮತ್ತು ಅಲ್ಲಾಹನೇ ಸನ್ಮಾರ್ಗ ತೋರದಿದ್ದರೆ ಅಂತಹವನಿಗೆ ಬೇರಾವ ಮಾರ್ಗದರ್ಶಕನೂ ಇಲ್ಲ. ಪುನರುತ್ಥಾನದಿನ (ತನ್ನ ಮುಖದ ಮೇಲೆ) ಯಾತನೆಯ ಉಗ್ರ ಹೊಡೆತವನ್ನು ತಿನ್ನುವವನ ದುರವಸ್ಥೆಯನ್ನು ನೀವು ಊಹಿಸ ಬಲ್ಲಿರಾ? ಇಂತಹ ಅಕ್ರಮಿಗಳೊಡನೆ "ಈಗ ನೀವು ಮಾಡುತ್ತಿದ್ದ ಗಳಿಕೆಯ ರುಚಿಯನ್ನು ಸವಿಯಿರಿ" ಎಂದು ಹೇಳಲಾಗುವುದು. ಇವರಿಗಿಂತ ಮುಂಚೆಯೂ ಅನೇಕರು ಇದೇ ರೀತಿ ಸುಳ್ಳಾಗಿಸಿದ್ದಾರೆ. ಕೊನೆಗೆ ಅವರ ಯೋಚನೆಗೂ ನಿಲುಕದ ಕಡೆಯಿಂದ ಅವರ ಮೇಲೆ ಯಾತನೆ ಬಂತು. ತರುವಾಯ ಅಲ್ಲಾಹನು ಅವರಿಗೆ ಲೌಕಿಕ ಜೀವನದಲ್ಲೇ ಅಪಮಾನದ ರುಚಿಯನ್ನು ಸವಿಸಿದನು ಮತ್ತು ಪರಲೋಕದ ಯಾತನೆಯಂತೂ ಇದಕ್ಕಿಂತಲೂ ಉಗ್ರವಾಗಿದೆ. ಇವರು ಅರಿಯುತ್ತಿದ್ದರೆ!" - ಅಝ್ಝುಮರ್: 21-26

ದೇವನ ಅಸ್ತಿತ್ವವನ್ನು ಮತ್ತು ಇಹಲೋಕ ಜೀವನದ ನಶ್ವರತೆಯನ್ನು ಮನುಷ್ಯನಿಗೆ ನೆನಪಿಸುವ ಅದೆಷ್ಟೋ ವಸ್ತುಗಳು, ಮಾನವನ ಸುತ್ತಮುತ್ತ ಹರಡಿಕೊಂಡಿವೆ. ಅಂತಹ ವಿಚಾರಪ್ರಚೋದಕ ವಸ್ತುಗಳ ಪೈಕಿ ಒಂದಾದ ಮಳೆಯನ್ನು ಇಲ್ಲಿ ಉದಾಹರಿಸಲಾಗಿದೆ. ಈ ಮಳೆಯನ್ನು ಬಾನಿನಿಂದ ಸುರಿಸುವ ವ್ಯವಸ್ಥೆ ಮಾಡುವವನು, ಸುರಿದ ಬಳಿಕ ಭೂಮಿಯ ಮೇಲೂ ಒಳಗೂ ಅದನ್ನು ಶೇಖರಿಸಲು ಮತ್ತು ವರ್ಷಾದ್ಯಂತ ಅದನ್ನು ಹರಿಸುತ್ತಿರಲು ಬೇಕಾದ ವ್ಯವಸ್ಥೆ ಮಾಡುವವನು ಅಲ್ಲಾಹನೇ. ಈ ನೀರಿನ ಸಹಾಯದಿಂದ ನಿಮ್ಮ ಹೊಲ-ಗದ್ದೆಗಳಲ್ಲಿ ನೀವು ವಿವಿಧ ಬೆಳೆಗಳನ್ನು ಬೆಳೆಸುತ್ತೀರಿ. ಬೆಳೆಯು ಚೆನ್ನಾಗಿ ಬೆಳೆದು, ಪಕ್ವವಾಗಿ ಹಳದಿ ವರ್ಣಕ್ಕೆ ತಿರುಗುತ್ತದೆ. ಈ ರೀತಿ ಒಮ್ಮೆ ಸೌಂದರ್ಯದ ಉತ್ತುಂಗ ಪಡೆಯುವ ಹೊಲ ಮತ್ತೆ ಕೆಲವೇ ದಿನಗಳಲ್ಲಿ ಒಣಗಿ ಬರಡಾಗಿ ಬಿಡುತ್ತದೆ. ಇವೆಲ್ಲಾ ಒಂದೆಡೆ ಸೃಷ್ಟಿಕರ್ತನ ಮಹಿಮೆಗೆ ಸಾಕ್ಷಿಯಾಗಿದ್ದರೆ, ಇನ್ನೊಂದೆಡೆ ಈ ಲೋಕ ಮತ್ತು ಇಲ್ಲಿಯ ಜೀವನದ ನಶ್ವರತೆಗೆ ಒಂದು ಉದಾಹರಣೆಯೂ ಆಗಿದೆ.

ಮನುಷ್ಯನ ಬದುಕೂ ಪೈರಿನಂತೆ. ಅದು ವಿವಿಧ ಹಂತಗಳನ್ನು ಹಾದು ಹೋಗುತ್ತದೆ. ಪೈರು ಬೇರೆ ಬೇರೆ ಹಂತಗಳಲ್ಲಿ ಬೇರೆ ಬೇರೆ ವರ್ಣ ಮತ್ತು ಗಾತ್ರ ಪಡೆಯುವಂತೆ ಮನುಷ್ಯನು ವಯಸ್ಸಿನ ವಿವಿಧ ಮಜಲುಗಳನ್ನು ಕಾಣುತ್ತಾನೆ. ಆದರೆ ಕೊನೆಗೊಮ್ಮೆ ಅವನ ಬದುಕೂ ಆ ಪೈರಿನಂತೆ ನಾಶವಾಗುತ್ತದೆ. ಹಸಿರು ಪೈರು ಒಣಗಿ ಮತ್ತೆ ಮಣ್ಣಿನ ಜೊತೆ ಮಿಶ್ರವಾಗುವಂತೆ ಮನುಷ್ಯನೂ ಅಂತಿಮವಾಗಿ ಮಣ್ಣನ್ನೇ ಸೇರುತ್ತಾನೆ.

ಮನುಷ್ಯನಿಗೆ ಹಸಿವು ದಾಹಗಳು ಮತ್ತು ಅವುಗಳನ್ನು ತಣಿಸಲು ತಿನ್ನುವ-ಕುಡಿಯುವ ಅಭ್ಯಾಸಗಳೂ ಇವೆ. ಇಲ್ಲಿ ಮಾನವನಿಗೆ ರೋಗ ರುಜಿನಗಳು ಎದುರಾಗುತ್ತದೆ. ಅದಕ್ಕೆ ಅವನು ಚಿಕಿತ್ಸೆಯನ್ನು ಮಾಡುತ್ತಾನೆ. ಇವೆಲ್ಲಾ ಕೇವಲ ಅವನ ಶಾರೀರಿಕ ಅಸ್ತಿತ್ವಕ್ಕೆ ಸಂಬಂಧಿಸಿದ ವಿಷಯಗಳು. ಆದರೆ ಮನುಷ್ಯನಿಗೆ ಇತರ ಪ್ರಾಣಿಗಳಂತೆ ಕೇವಲ ಶಾರೀರಿಕ ಅಗತ್ಯಗಳು ಮಾತ್ರ ಇರುವುದಲ್ಲ. ದೇವನು ಮನುಷ್ಯನನ್ನು ಇತರೆಲ್ಲಾ ಪ್ರಾಣಿಗಳಿಗಿಂತ ಭಿನ್ನವಾಗಿ, ಉನ್ನತವಾಗಿ ಸೃಷ್ಟಿಸಿರುವನು. ಅವನಿಗೆ ಬುದ್ಧಿ ಮತ್ತು ವಿವೇಚನಾ ಶಕ್ತಿಯನ್ನು ಕೊಟ್ಟಿರುವನು. ಆದ್ದರಿಂದ ಅವನ ಪ್ರವೃತ್ತಿ ಮತ್ತು ಜೀವನ ವಿಧಾನವೂ ಇತರ ಪ್ರಾಣಿಗಳಿಗಿಂತ ಭಿನ್ನವಾಗಿರಬೇಕು. ಬೇರೆ ಪಶು-ಪ್ರಾಣಿಗಳಂತೆ ಅವನು ಸ್ವೇಚ್ಛಾಚಾರಿಯಾಗಿ ಬಾಳುವ ಬದಲು ಒಂದು ನಿಶ್ಚಿತ ಶಿಸ್ತಿಗೆ ಬದ್ಧನಾಗಿ ಬಾಳಬೇಕು. ಇದು ಅವನ ನೈತಿಕ ಅಸ್ತಿತ್ವದ ಬೇಡಿಕೆ.

ದೇವನು ಮನುಷ್ಯನ ಶಾರೀರಿಕ ಅಗತ್ಯಗಳ ಈಡೇರಿಕೆಗಾಗಿ ಬಾನಿನಿಂದ ನೀರು ಸುರಿಸಿ, ಆ ನೀರಿನ ಸಂರಕ್ಷಣೆಯ ಏರ್ಪಾಡು ಮಾಡಿ, ಅದರ ಮೂಲಕ ವಿವಿಧ ಫಲ ಮತ್ತು ಧಾನ್ಯಗಳನ್ನು ಸೃಷ್ಟಿಸಿರುವಂತೆಯೇ ಮನುಷ್ಯನ ನೈತಿಕ ಮತ್ತು ಆಧ್ಯಾತ್ಮಿಕ ಅಗತ್ಯಗಳನ್ನು ಈಡೇರಿಸುವ ಏರ್ಪಾಡನ್ನೂ ಮಾಡಿರುವನು. ಇದಕ್ಕಾಗಿ ಅವನು ದೇವದೂತರ ಮೂಲಕ ಮನುಷ್ಯರಿಗೆ ಸರಿಯಾದ ಜೀವನ ವಿಧಾನವನ್ನೂ ಸತ್ಯ ಮತ್ತು ಸನ್ಮಾರ್ಗದ ಸಂದೇಶವನ್ನೂ ಕಳುಹಿಸಿರುವನು.

ಒಬ್ಬ ವ್ಯಕ್ತಿ ಲೌಕಿಕ ಸಂಪತ್ತುಗಳನ್ನು ಎಷ್ಟೇ ಸಂಪಾದಿಸಿರಲಿ, ಅಥವಾ ಶಾರೀರಿಕವಾಗಿ ಅವನು ಎಷ್ಟೇ ಬಲಶಾಲಿ ಆಗಿರಲಿ. ಪ್ರಸ್ತುತ ಸನ್ಮಾರ್ಗವು ಅವನಿಗೆ ಸಿಗದಿದ್ದರೆ ಅವನು ಕಾರ್ಗತ್ತಲಲ್ಲಿ ಅಲೆಯುತ್ತಿದ್ದಾನೆಂದೇ ಅರ್ಥ. ಇನ್ನು ಒಬ್ಬನಿಗೆ ಸತ್ಯಸಂದೇಶವನ್ನು ಸ್ವೀಕರಿಸಿ ಸನ್ಮಾರ್ಗದಲ್ಲಿ ನಡೆಯುವ ಭಾಗ್ಯ ದೊರೆತರೆ, ಅಲ್ಲಾಹನು ಅವನ ಮನಸ್ಸನ್ನು ಮುಕ್ತಗೊಳಿಸಿದ್ದು ಅವನು ಬೆಳಕಿನಲ್ಲಿದ್ದಾನೆಂದು ಅರ್ಥ.

ಇಷ್ಟೆಲ್ಲಾ ಅನುಗ್ರಹಗಳನ್ನು ಮಾಡಿದ ದೇವನನ್ನು ಮರೆತು ಬಿಟ್ಟರೆ ಮತ್ತು ಅಲ್ಲಾಹನನ್ನು ಸ್ಮರಿಸುವುದೇ ಇಲ್ಲವೆಂದಾದರೆ ಮನುಷ್ಯನ ಮನಸ್ಸು ಕಠಿಣವಾಗಿ, ನಿರ್ಜೀವವಾಗಿದೆಯೆಂದೇ ಅರ್ಥ. ಇಂತಹ ಕೃತಘ್ನರು ಮತ್ತು ವ್ಯಕ್ತವಾದ ತಪ್ಪು ದಾರಿಯಲ್ಲಿ ನಡೆಯುವ ಪಥಭ್ರಷ್ಟರು ಪರಲೋಕದಲ್ಲಿ ವಿನಾಶವನ್ನು ಎದುರಿಸ ಬೇಕಾಗುತ್ತದೆ.

ಅಲ್ಲಾಹನ ಸಂದೇಶವನ್ನು ಒಳಗೊಂಡಿರುವ ಪವಿತ್ರ ಕುರ್‌ಆನಿನ ವಾಕ್ಯಗಳಲ್ಲಿ ಯಾವುದೇ ವಿರೋಧಾಭಾಸಗಳಿಲ್ಲ. ಅಲ್ಲದೆ ಮನುಷ್ಯನ ನೆನಪಿಗಾಗಿ ಅದರಲ್ಲಿ ಕೆಲವು ವಿಷಯಗಳನ್ನು ಪದೇಪದೇ ಪುನರಾವರ್ತಿಸಿ ಹೇಳಲಾಗಿದೆ. ನಿಜವಾದ ದೇವಭಯವುಳ್ಳವರು ಅದರಲ್ಲಿನ ದೇವವಾಕ್ಯಗಳನ್ನು ಓದಿದಾಗ ರೋಮಾಂಚನಗೊಳ್ಳುತ್ತಾರೆ. ಅವರು ಕೇವಲ ಶಾರೀರಿಕ ಆರಾಧನೆಗಳನ್ನು ಮಾತ್ರ ಮಾಡುವುದಲ್ಲ. ಶರೀರದ ಜೊತೆ ಅವರ ಮನಸ್ಸುಗಳೂ ದೇವನನ್ನು ಸ್ಮರಿಸುತ್ತಾ, ಸ್ಪಂದಿಸುತ್ತಾ ಇರುತ್ತವೆ.

ಅಕ್ರಮಿಗಳು ಅಹಂಕಾರದಿಂದ ಸತ್ಯವನ್ನು ತಿರಸ್ಕರಿಸುತ್ತಾರೆ. ಈ ಅಹಂಕಾರದ ಫಲ ಉಣ್ಣಬೇಕಾದೀತೆಂದು ಅವರು ಆಲೋಚಿಸುವುದೇ ಇಲ್ಲ. ಕೊನೆಗೊಮ್ಮೆ ಅನಿರೀಕ್ಷಿತವಾಗಿ ಅನಿರೀಕ್ಷಿತ ದಿಕ್ಕಿನಿಂದ ಅವರಿಗೆ ವಿಪತ್ತುಗಳು ಬಂದೆರಗುತ್ತವೆ. ಯಾವ ಕಾಲದಲ್ಲೇ ಆಗಲೀ ಸತ್ಯವನ್ನು ನಿರಾಕರಿಸಿದವರು ಈ ಲೋಕದಲ್ಲೂ ನಿಂದ್ಯರಾಗುತ್ತಾರೆ. ಪರಲೋಕದಲ್ಲೂ ಘೋರ, ಶಾಶ್ವತ ಯಾತನೆಗೆ ತುತ್ತಾಗಬೇಕಾಗುತ್ತದೆ. ಆಗ ಅವರೊಡನೆ, ನಿಮ್ಮನ್ನು ಸುಮ್ಮನೆ ಶಿಕ್ಷಿಸುತ್ತಿರುವುದಲ್ಲ. ನಿಮ್ಮ ಕರ್ಮಗಳ ಫಲವಾಗಿ ಶಿಕ್ಷಿಸಲಾಗುತ್ತಿದೆ ಎಂದು ಹೇಳಲಾಗುವುದು. ಇಂದೇ ಮನುಷ್ಯನು ಸತ್ಯವನ್ನು ಅಂಗೀಕರಿಸಿ ಅನುಸರಿಸದಿದ್ದರೆ ಅಂದು ಅಸಹಾಯಕನಾಗಿ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.

13

"ಓ ನಮ್ಮ ಪ್ರಭೂ, ನಾವು ಸತ್ಯವಿಶ್ವಾಸದ ಕಡೆಗೆ ಆಹ್ವಾನಿಸುತ್ತಿದ್ದ ಮತ್ತು ನಿಮ್ಮ ಪ್ರಭುವನ್ನು ನಂಬಿರೆಂದು ಹೇಳುತ್ತಿದ್ದ ಓರ್ವ ಕರೆಕೊಡುವಾತನನ್ನು ಆಲಿಸಿದೆವು. ನಾವು ಅವನ ಆಹ್ವಾನವನ್ನು ಸ್ವೀಕರಿಸಿದೆವು. ಆದುದರಿಂದ ಓ ನಮ್ಮೊಡೆಯಾ, ನಮ್ಮಿಂದ ಸಂಭವಿಸಿ ಹೋಗಿದ್ದ ಅಪರಾಧಗಳನ್ನು ಕ್ಷಮಿಸು. ನಮ್ಮಲ್ಲಿರುವ ಕೆಡುಕುಗಳನ್ನು ದೂರೀಕರಿಸು ಮತ್ತು

ನಮ್ಮ ಅವಸಾನವನ್ನು ಸಜ್ಜನರೊಂದಿಗೆ ಮಾಡು. ಓ ನಮ್ಮ ಪ್ರಭೂ, ನೀನು ನಿನ್ನ ಸಂದೇಶ ವಾಹಕರ ಮೂಲಕ ಮಾಡಿರುವ ವಾಗ್ದಾನಗಳನ್ನು ನಮಗೆ ನೆರವೇರಿಸಿಕೊಡು ಮತ್ತು ಪುನರುತ್ಥಾನ ದಿನದಂದು ನಮ್ಮನ್ನು ಅವಮಾನಕ್ಕೊಳಪಡಿಸಬೇಡ. ನಿಶ್ಚಯವಾಗಿಯೂ ನೀನು ನಿನ್ನ ವಾಗ್ದಾನಕ್ಕೆ ವ್ಯತಿರಿಕ್ತವಾಗಿ ನಡೆಯುವವನಲ್ಲ.

ಉತ್ತರವಾಗಿ ಅವರ ಪ್ರಭು ಹೇಳಿದನು, "ನಾನು ನಿಮ್ಮಲ್ಲಿ ಯಾರೊಬ್ಬನ ಕರ್ಮವನ್ನೂ ನಿಷ್ಫಲಗೊಳಿಸುವವನಲ್ಲ. ಪುರುಷರಾಗಲಿ ಸ್ತ್ರೀಯರಾಗಲಿ ನೀವೆಲ್ಲ ಒಂದೇ ವರ್ಗದವರು. ಆದುದರಿಂದ ಯಾರೂ ನನಗಾಗಿ ತಮ್ಮ ದೇಶ ತ್ಯಾಗ ಮಾಡಿದರೋ ನನ್ನ ಮಾರ್ಗದಲ್ಲಿ ಮನೆ ಮಾರುಗಳಿಂದ ಹೊರಕ್ಕಟ್ಟಲ್ಪಟ್ಟರೋ, ಸತಾಯಿಸಲ್ಪಟ್ಟರೋ, ನನಗಾಗಿ ಹೋರಾಟ ನಡೆಸಿದರೋ ಮತ್ತು ವಧಿಸಲ್ಪಟ್ಟರೋ ಅವರೆಲ್ಲರ ಅಪರಾಧಗಳನ್ನು ನಾನು ಕ್ಷಮಿಸಿ ಬಿಡುವೆನು ಮತ್ತು ಅವರಿಗೆ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಉದ್ಯಾನಗಳಲ್ಲಿ ಪ್ರವೇಶ ಕೊಡುವೆನು. ಇದು ಅವರಿಗೆ ಅಲ್ಲಾಹನ ಬಳಿ ಇರುವ ಪ್ರತಿಫಲ ಮತ್ತು ಅತ್ಯುತ್ತಮ ಪ್ರತಿಫಲ ಅಲ್ಲಾಹನ ಬಳಿಯಲ್ಲೇ ಇದೆ.

ಓ ಪೈಗಂಬರರೇ, ನಾಡುಗಳಲ್ಲಿ ಅಲ್ಲಾಹನ ಅವಿಧೇಯದಾಸರ ಮೆರೆದಾಟವು ನಿಮ್ಮನ್ನು ವಂಚಿಸದಿರಲಿ. ಇದು ಕೇವಲ ಕೆಲವೇ ದಿನಗಳ ಬಾಳುವೆಯ ಕಿಂಚಿತ್ ಸುಖಭೋಗ. ಅನಂತರ ಇವರೆಲ್ಲರೂ ಅತಿ ನಿಕೃಷ್ಟ ವಾಸಸ್ಥಾನವಾಗಿರುವ ನರಕಾಗ್ನಿಯನ್ನು ಸೇರುವರು. ಇದಕ್ಕೆ ವ್ಯತಿರಿಕ್ತವಾಗಿ ತಮ್ಮ ಪ್ರಭುವನ್ನು ಭಯಪಡುತ್ತ ಜೀವನ ನಡೆಸುವವರಿಗಾಗಿ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಉದ್ಯಾನಗಳಿದ್ದು ಅವುಗಳಲ್ಲಿ ಅವರು ಸದಾಕಾಲ ವಾಸಿಸುವರು. ಅವರಿಗೆ ಅಲ್ಲಾಹನ ವತಿಯಿಂದ ಆತಿಥ್ಯವಿದು ಮತ್ತು ಯಾವುದು ಅಲ್ಲಾಹನ ಬಳಿ ಇದೆಯೋ ಅದುವೇ ಸಜ್ಜನರಿಗೆ ಅತ್ಯುತ್ತಮ." -ಆಲಿ ಇಮ್‌ರಾನ್ : 193-198

ಮನುಷ್ಯನನ್ನು ಸೃಷ್ಟಿಸಿದ ದೇವನು, ಮನುಷ್ಯನ ಸಣ್ಣ-ದೊಡ್ಡ ಎಲ್ಲ ಅಗತ್ಯಗಳನ್ನೂ ಈಡೇರಿಸುವ ಏರ್ಪಾಡನ್ನು ಮಾಡಿದ್ದಾನೆ. ಅವನು ಮಾನವನಿಗೆ ಕೇವಲ ಲೌಕಿಕ ಜೀವನೋಪಾಯವನ್ನು ಮಾತ್ರ ಕೊಟ್ಟಿರುವುದಲ್ಲ. ಮನುಷ್ಯನ ಇಹ-ಪರ ವಿಜಯಕ್ಕೆ ಅಗತ್ಯವಾಗಿರುವ ಸನ್ಮಾರ್ಗವನ್ನೂ ತೋರಿಸಿರುವನು. ಇದಕ್ಕಾಗಿ ಎಲ್ಲ ಕಾಲಗಳಲ್ಲೂ ಅವನು ಅತ್ಯುತ್ತಮ ಮನುಷ್ಯರನ್ನು ಆರಿಸಿ ಅವರಿಗೆ ತನ್ನ ಸಂದೇಶವನ್ನು ಕೊಟ್ಟು, ಮನುಷ್ಯರಿಗೆಲ್ಲಾ ಆ ಸಂದೇಶವನ್ನು ತಲುಪಿಸುವ ಹೊಣೆ ವಹಿಸಿಕೊಟ್ಟನು.

ದೇವನಿಂದ ಆರಿಸಲ್ಪಟ್ಟ ಪ್ರವಾದಿಗಳು ಜನರಿಗೆ ದೇವನ ಸಂದೇಶವನ್ನು ತಿಳಿಸಿದರು. ನಿಜವಾದ ಸೃಷ್ಟಿಕರ್ತ ಯಾರೆಂಬುದನ್ನು, ಆರಾಧನೆ ಯಾರಿಗೆ ಸಲ್ಲಬೇಕೆಂಬುದನ್ನು, ಮನುಷ್ಯರ ಕರ್ತವ್ಯಗಳೇನು ಮತ್ತು ಅವರು ಯಾವ ರೀತಿ ಜೀವಿಸಬೇಕೆಂಬುದನ್ನು ತಿಳಿಸುತ್ತಿದ್ದರು. ಈ ಎಲ್ಲ ಪ್ರವಾದಿಗಳೂ ಮೂಲತಃ "ದೇವನಿಗೆ ಶರಣಾಗಿ, ಅವನ ದಾಸ್ಯ ಸ್ವೀಕರಿಸಿ, ಅವನನ್ನು ಮಾತ್ರ ಆರಾಧಿಸಿ, ಅವನು ಸೂಚಿಸಿದ ಸನ್ಮಾರ್ಗದಲ್ಲೇ ನಡೆಯಿರಿ" ಎಂದೇ ಜನರನ್ನು ಆಹ್ವಾನಿಸಿದರು. ಅವರ ಈ ಆಹ್ವಾನವನ್ನು ಎಲ್ಲರೂ ಸ್ವೀಕರಿಸುವುದಿಲ್ಲ. ಕೆಲವರು

ನಿರ್ಲಕ್ಷಿಸುತ್ತಾರೆ. ಕೆಲವರು ಅಣಕಿಸುತ್ತಾರೆ. ಕೆಲವರು ವಿರೋಧಿಸುತ್ತಾರೆ, ಕೆಲವರು ಮಾತ್ರ ಸ್ವೀಕರಿಸುತ್ತಾರೆ. ಅವರಿಗೆ ಪ್ರವಾದಿಗಳ ಕರೆ ತಮ್ಮದೇ ಮನದಾಳದ ಕರೆಯೆಂಬಂತೆ ತೋರುತ್ತದೆ. ಅವರ ಆತ್ಮಸಾಕ್ಷಿಯು ಸತ್ಯಸಂದೇಶವನ್ನು ತಕ್ಷಣ ಗುರುತಿಸುತ್ತದೆ. ಹೀಗೆ ಸತ್ಯ ಸ್ವೀಕರಿಸಿದವರು ತಮ್ಮ ನೈಜ ದೇವನನ್ನು ಗುರುತಿಸಿದ ಬಳಿಕ ಅವನೊಡನೆ ಪ್ರಾರ್ಥಿಸುತ್ತಾರೆ. ಪ್ರವಾದಿಗಳ ಮತ್ತು ಸತ್ಯ ಪ್ರಚಾರಕರ ಕರೆಗೆ ತಾವು ಓಗೊಟ್ಟಿದ್ದೇವೆಂದೂ ತಮ್ಮ ದೋಷ-ದೌರ್ಬಲ್ಯ, ಪಾಪಗಳನ್ನೆಲ್ಲಾ ಕ್ಷಮಿಸಬೇಕೆಂದೂ ಪ್ರವಾದಿಗಳಿಗೆ ವಾಗ್ದಾನ ಮಾಡಲಾದಂಥ ವಿಜಯವನ್ನು ತಮಗೆ ದಯಪಾಲಿಸೆಂದೂ ಇಹ-ಪರಗಳಲ್ಲಿ ಅಪಮಾನಗಳಿಂದ ರಕ್ಷಿಸಬೇಕೆಂದೂ ಅವರು ದೇವನೊಡನೆ ಬೇಡುತ್ತಾರೆ.

ಇದಕ್ಕೆ ಉತ್ತರವಾಗಿ ಅಲ್ಲಾಹನು ಕರ್ಮದ ಮಹತ್ವವನ್ನು, ಪರಲೋಕದಲ್ಲಿ ವಿಜಯ ಸಾಧಿಸಬಯಸುವವರು ಯಾವ ರೀತಿ ಸತ್ಯದ ಮಾರ್ಗದಲ್ಲಿ ಇಹಜೀವನದಲ್ಲಿ ಹೋರಾಡ ಬೇಕೆಂಬುದನ್ನು ತಿಳಿಸುತ್ತಾನೆ. ಸ್ತ್ರೀಯಿರಲಿ, ಪುರುಷನಿರಲಿ ನೀವು ಮಾಡುವ ಯಾವ ಕರ್ಮವೂ ವ್ಯರ್ಥವಾಗುವುದಿಲ್ಲ. ಪ್ರತಿಯೊಂದು ಕರ್ಮಕ್ಕೂ ಅದರ ಸ್ವರೂಪಕ್ಕೆ ತಕ್ಕಂತೆ ಪ್ರತಿಫಲ ಇದೆ. ತನ್ನ ಮಾರ್ಗದಲ್ಲಿ ಅಥವಾ ಸತ್ಯದ ಮಾರ್ಗದಲ್ಲಿ ತಮ್ಮ ನಾಡನ್ನೂ ಮನೆ ಮಠ ಗಳನ್ನೂ ತ್ಯಜಿಸಿದವರು, ಸತ್ಯಕ್ಕಾಗಿ ಹಿಂಸಿಸಲ್ಪಟ್ಟವರು, ಸತ್ಯಕ್ಕಾಗಿ ಹೋರಾಡಿದವರು ಮತ್ತು ಸತ್ಯಕ್ಕಾಗಿಯೇ ಮಡಿದವರು ಖಂಡಿತ ಎಲ್ಲ ಪುರಸ್ಕಾರಗಳಿಗೆ ಅರ್ಹರಾಗಿರುತ್ತಾರೆ. ಅವರ ಪ್ರಾರ್ಥನೆಯಂತೆ, ಅವರ ಪಾಪಗಳು ಕ್ಷಮಿಸಲ್ಪಡುವವು ಮತ್ತು ಅವರಿಗೆ ವಾಗ್ದಾನ ಮಾಡಲಾದ ವಿಜಯ ಮತ್ತು ಸುಖಮಯ ಸ್ವರ್ಗವು ಅವರಿಗೆ ಖಂಡಿತ ಸಿಗುವುದು ಎಂದು ಅಲ್ಲಾಹನು ಇಲ್ಲಿ ಆಶ್ವಾಸನೆಯಿತ್ತಿರುವನು.

ಲೋಕದಲ್ಲಿ ಸತ್ಯಧರ್ಮಗಳನ್ನು ಧಿಕ್ಕರಿಸಿದ ಅದೆಷ್ಟೋ ಮಂದಿ ಬಹಳ ಸುಖಾಡಂಬರ ಗಳಲ್ಲಿ ಜೀವಿಸುತ್ತಿರಬಹುದು. ಅದನ್ನು ಕಂಡು ಮರುಳಾಗಬೇಡಿ. ಅದೆಲ್ಲಾ ಅವರ ಸೌಭಾಗ್ಯ ವೆಂದು ಭಾವಿಸಬೇಡಿ. ನಿಮಗೆ ಅದೆಲ್ಲಾ ಸಿಗಲಿಲ್ಲವೆಂದು ಕೊರಗಬೇಡಿ. ಈ ತಾತ್ಕಾಲಿಕ ಲೋಕದಲ್ಲಿ ಸಿಗುವ ಎಲ್ಲ ಸಂಪತ್ತು-ಸೌಕರ್ಯಗಳೂ ತೀರಾ ತಾತ್ಕಾಲಿಕ ಹಾಗೂ ನಶ್ವರ. ಈಗ ಸುಖದಲ್ಲಿರುವ ಇವರು-ಸತ್ಯವನ್ನು ಧಿಕ್ಕರಿಸಿದ್ದಕ್ಕಾಗಿ - ಕೊನೆಗೆ ನರಕದ ಘೋರ ಶಿಕ್ಷೆ ಅನುಭವಿಸಲಿರುವರು. ಅವರು ಅತ್ಯಂತ ದಾರುಣ ಭವಿಷ್ಯದವರು ಎಂದು ಸತ್ಯವಿಶ್ವಾಸಿ ಗಳಿಗೆ ಇಲ್ಲಿ ಸಾಂತ್ವನ ಹೇಳಲಾಗಿದೆ.

ಕೊನೆಯಲ್ಲಿ ಮತ್ತೆ ದೇವನನ್ನು ಭಯಪಡುತ್ತಾ, ಬಹಳ ಜಾಗರೂಕತೆಯೊಂದಿಗೆ ಸತ್ಯಸಂಧರಾಗಿ ಸನ್ಮಾರ್ಗದಿಂದ ಸ್ವಲ್ಪವೂ ಕದಲದೆ ಬದುಕಿದವರಿಗೆ ಮರಣಾನಂತರ ಶಾಶ್ವತವಾದ ಸುಖ ದಯಪಾಲಿಸುವನೆಂದು ಹೇಳಲಾಗಿದೆ. ಉತ್ತಮ ಜನರಿಗೆ ಅಲ್ಲಾಹನ ಬಳಿ ಇರುವ ಪ್ರತಿಫಲವೂ ಅತ್ಯುತ್ತಮವಾದುದು ಎಂದೂ ತಿಳಿಸಲಾಗಿದೆ.

14

"ಅಲ್ಲಾಹನಿಗೇ ಸರ್ವಸ್ತುತಿ ಅವನು ಸಕಲ ವಿಶ್ವದ ಪ್ರಭು. ಪರಮ ದಯಾಳು, ಕರುಣಾನಿಧಿ- ನಿರ್ಣಾಯಕ ದಿನದ ಅಧಿಪತಿ (ಆದ ಪ್ರಭುವೇ)- ನಾವು ನಿನಗೆ ಮಾತ್ರ ಇಬಾದತ್ (ಆರಾಧನೆ) ಮಾಡುತ್ತೇವೆ ಮತ್ತು ನಿನ್ನೊಡನೆ ಮಾತ್ರ ಸಹಾಯ ಬೇಡುತ್ತೇವೆ. ನಮಗೆ 'ಸನ್ಮಾರ್ಗ'ವನ್ನು ತೋರಿಸು. ನೀನು ಅನುಗ್ರಹಿಸಿದವರ ಮಾರ್ಗ. ನಿನ್ನ ಕ್ರೋಧಕ್ಕೆ ಪಾತ್ರರಾದವರ ಮಾರ್ಗವಲ್ಲ. (ನೀನು ತೋರಿದ) ದಾರಿಯನ್ನು ತಪ್ಪಿ ನಡೆದವರ ಮಾರ್ಗವೂ ಅಲ್ಲ." - ಅಲ್ ಫಾತಿಹ : 2-7

ದೇವನೆದುರು ಮಾನವ ನವಜಾತ ಶಿಶುವಿನಂತೆ. ಜನನವಾದ ಬಳಿಕ ಆ ಮಗು ತಕ್ಷಣವೇ ತನ್ನ ತಾಯಿಯೆಡೆಗೆ ಧಾವಿಸುತ್ತದೆ, ಅಳುತ್ತಿರುತ್ತದೆ. ಆದರೆ ತಾನು ಏನನ್ನು ಕೇಳಬೇಕು ಹೇಗೆ ಕೇಳಬೇಕು ಎಂಬುದು ಅದಕ್ಕೆ ತಿಳಿದಿರುವುದಿಲ್ಲ. ಇದೇ ರೀತಿ ಮಾನವ ಕೂಡಾ, ದೇವನ ಬಗ್ಗೆ ಪ್ರಜ್ಞೆ ಮೂಡಿದೊಡನೆ ಅವನು ದೇವನೆಡೆಗೆ, ಧಾವಿಸುತ್ತಾನೆ ರೋದಿಸುತ್ತಾನೆ. ಆಗ ಎಲ್ಲ ತಾಯಂದಿರಿಗಿಂತ ಹೆಚ್ಚು ವಾತ್ಸಲ್ಯಮಯಿಯಾದ ಅಲ್ಲಾಹನು ಅವನನ್ನು ಸ್ವಾಗತಿಸುತ್ತಾನೆ. ಬೇಡಿ ಬಯಸುವ ದಾಸನಿಗೆ, ಏನನ್ನು ಬೇಡಬೇಕು, ಯಾವ ರೀತಿ ಬೇಡಬೇಕು ಎಂಬುದನ್ನು ತಾನೇ ಕಲಿಸುತ್ತಾನೆ. ಪ್ರಸ್ತುತ ಅಲ್‌ಫಾತಿಹಾ ಅಧ್ಯಾಯವು, ದೇವನು ಕಲಿಸಿದ ಪ್ರಾರ್ಥನೆಯೇ ಆಗಿದೆ.

ಪವಿತ್ರ ಕುರ್‌ಆನಿನ ಪ್ರಥಮ ಅಧ್ಯಾಯವಾಗಿರುವ ಅಲ್ ಫಾತಿಹಾದಲ್ಲಿ ಒಟ್ಟು 7 ವಾಕ್ಯಗಳಿವೆ.

"ಅಲ್ಲಾಹನಿಗೇ ಸರ್ವಸ್ತುತಿ ಅವನು ಸಕಲ ವಿಶ್ವದ ಪ್ರಭು"

ಇದು ಪ್ರಥಮ ವಚನ. ಜಗತ್ತಿನಲ್ಲಿ ನಮ್ಮ ಸುತ್ತಮುತ್ತ ನಮ್ಮ ಶ್ಲಾಘನೆಗೆ ಅರ್ಹವಾದ ಅಪಾರ ವಸ್ತುಗಳಿವೆ. ನಮಗೆ ಹಿತವಾಗಿ ಕಾಣುವ, ಮೆಚ್ಚುಗೆಯಾಗುವ, ನಾವು ಪ್ರೀತಿಸುವ, ನಮ್ಮನ್ನು ಪ್ರೀತಿಸುವ ಎಷ್ಟೋ ಅಸ್ತಿತ್ವಗಳು ಇಲ್ಲಿವೆ. ಸುಂದರ, ಅದ್ಭುತ ವಸ್ತುಗಳಿವೆ. ನಮ್ಮ ತಾಯಿತಂದೆ, ಅಣ್ಣ, ಸಹೋದರ, ಸಹೋದರಿಯರು, ಬಂಧುಗಳು ಹೀಗೆ ನಮ್ಮ ಹೊಗಳಿಕೆಗೆ ಅರ್ಹರಾದವರು ಹೆಚ್ಚೆಹೆಚ್ಚಿಗೂ ಇದ್ದಾರೆ. ಗಾಳಿ, ನೀರು, ಭೂಮಿ, ಆಕಾಶ, ಗಿಡಬಳ್ಳಿ ಹೀಗೆ ಎಲ್ಲವೂ ಒಂದಿಲ್ಲೊಂದು ವಿಧದಲ್ಲಿ ನಮ್ಮ ಸ್ತುತಿಗೆ ಅರ್ಹವಾಗಿವೆ.

ಆದರೆ ಈ ವಚನದಲ್ಲಿ ಸರ್ವಸ್ತುತಿ, ಸ್ತೋತ್ರ, ಹೊಗಳಿಕೆ, ಶ್ಲಾಘನೆ, ಪ್ರಶಂಸೆಗಳೂ ಅಲ್ಲಾಹನೊಬ್ಬನಿಗೇ ಮೀಸಲು ಎಂದು ಹೇಳಲಾಗಿದೆ. ಏಕೆ?... ಅದರ ಕಾರಣವೂ ಅದೇ ವಚನದಲ್ಲಿದೆ. ಸ್ತುತಿಗಳೆಲ್ಲಾ ಅಲ್ಲಾಹನಿಗೆ ಮಾತ್ರ ಮೀಸಲಿರಿಸುವುದು. ಏಕೆಂದರೆ ಅವನೇ ಸರ್ವಲೋಕಗಳ ಒಡೆಯ. ನಮಗೆ ಜಗತ್ತಿನಲ್ಲಿ ಕಾಣುವ, ವಿಶೇಷವಾಗಿ ಪ್ರಶಂಸನೀಯ ಎಂದು ತೋರುವ ಪ್ರಸ್ತುತ ಎಲ್ಲ ವಸ್ತು ಮತ್ತು ಎಲ್ಲ ವ್ಯಕ್ತಿಗಳು ಮತ್ತು ಎಲ್ಲ ಪ್ರೀತಿ, ಸೌಂದರ್ಯ ಮತ್ತು ಅದ್ಭುತಗಳ ಸೃಷ್ಟಿಕರ್ತ ಅವನೇ. ಹಾಗಿರುವಾಗ ಸರ್ವ ವಿಶ್ವ ಸೃಷ್ಟಿಕರ್ತನೂ

ಸರ್ವಲೋಕ ಪರಿಪಾಲಕನೂ ಎಲ್ಲವನ್ನೂ ಕೇಳಬಲ್ಲವನೂ ಎಲ್ಲವನ್ನು ನೋಡಬಲ್ಲವನೂ ಎಲ್ಲ ಸಾಮರ್ಥ್ಯಗಳನ್ನು ಸೃಷ್ಟಿಸುವವನೂ ಎಲ್ಲರ ಒಡೆಯನೂ ಆದ ಅಲ್ಲಾಹನೇ ಎಲ್ಲ ಸ್ತುತಿ ಸ್ತೋತ್ರಗಳಿಗೆ ಅರ್ಹನೆಂದು ಹೇಳುವುದು ಸಹಜವಲ್ಲವೇ?

"ಪರಮ ದಯಾಳು, ಕರುಣಾನಿಧಿ"

ಇದು ಎರಡನೇ ವಚನ. ಇದರಲ್ಲಿ ಅಲ್ಲಾಹನ 2 ವಿಶೇಷ ಗುಣಗಳನ್ನು ಪ್ರಸ್ತಾಪಿಸಲಾಗಿದೆ. ಪ್ರಾರ್ಥನೆಗೆ ನಿಂತ ದಾಸನು ಅಲ್ಲಾಹನ ಈ ವಿಶೇಷ ಗುಣಗಳನ್ನು ಪ್ರಸ್ತಾಪಿಸುವ ಮೂಲಕ ಅವನ ಮೇಲಿನ ತನ್ನ ಪ್ರೀತಿಯನ್ನು ಪ್ರಕಟಿಸುತ್ತಾನೆ. ಜೊತೆಗೇ ತನ್ನ ಆಶಾವಾದ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುತ್ತಾನೆ. ದೇವನ ದಯೆ ಮತ್ತು ಕರುಣೆಯನ್ನು ಯಾಚಿಸಲು ನಿಂತಿರುವಾಗ ಅವನು ದಯಾಳು ಮತ್ತು ಕರುಣಾಮಯಿ ಎಂಬುದನ್ನು ಘೋಷಿತವಾಗಿ ಅಂಗೀಕರಿಸುತ್ತಾನೆ.

"ನಿರ್ಣಾಯಕ ದಿನದ ಅಧಿಪತಿ (ಆದ ಪ್ರಭುವೇ)"

ಇದು ಮೂರನೆಯ ವಚನ. ಪ್ರಾರ್ಥಿಸುವವನು ಈ ವಚನವನ್ನು ಉಚ್ಚರಿಸುವ ಮೂಲಕ ಜೀವನದ ಬಗ್ಗೆ ತನ್ನ ದೃಷ್ಟಿಕೋನವನ್ನೂ ನೆನಪಿಸಿ ಕೊಂಡಂತಾಗುತ್ತದೆ. ಈ ಜೀವನ ಒಂದು ತಾತ್ಕಾಲಿಕ ಪರೀಕ್ಷಾ ಅವಧಿ ಆಗಿದ್ದು, ಈ ಪರೀಕ್ಷೆಯ ಫಲಿತಾಂಶ ಸಿಗುವ ದಿನವೊಂದು ಬರಲಿದೆ. ಅಂದು ಈ ಜಗತ್ತಿನಲ್ಲಿ ಈ ತನಕ ಹುಟ್ಟಿಬಂದ ಮತ್ತು ಅಂತ್ಯ ದಿನದ ವರೆಗೆ ಹುಟ್ಟುವ ಎಲ್ಲ ಮಾನವರನ್ನೂ ಇನ್ನೊಮ್ಮೆ ಜೀವಂತಗೊಳಿಸಲಾಗುವುದು. ಅವರ ಜೀವನದ ಒಂದೊಂದು ಕರ್ಮದ ಬಗ್ಗೆ ಪರಿಶೀಲನೆ ನಡೆಯುವುದು. ದೇವನ ಇಚ್ಛೆಯ ಪ್ರಕಾರ ಸತ್ಕರ್ಮ ಮಡುತ್ತಾ ಬದುಕಿದವರು ಸ್ವರ್ಗಕ್ಕೂ ದೇವನನ್ನು ಮರೆತು ತಮ್ಮಿಷ್ಟದಂತೆ ಜೀವನ ಕಳೆದವರು ನರಕಕ್ಕೂ ಹೋಗಬೇಕೆಂದು ತೀರ್ಮಾನಿಸಲಾಗುವುದು. ಮನುಷ್ಯನ ಶಾಶ್ವತ ಭವಿಷ್ಯವನ್ನು ನಿರ್ಧರಿಸುವ ಆ ನಿರ್ಣಾಯಕ ದಿನದ ಒಡೆಯ ಅಲ್ಲಾಹನೇ ಆಗಿರುವನು. ಅಂತಹ ದಿನವೊಂದು ಬರಲಿದೆ ಎಂದು ನಂಬಿದವರು ಇಹ ಜೀವನದ ಲಾಭ ನಷ್ಟಗಳಿಗೆ ಹೆಚ್ಚಿನ ಮಹತ್ವ ಕೊಡುವುದಿಲ್ಲ. ಇಲ್ಲಿ ಎಷ್ಟು ನಷ್ಟವಾದರೂ ಎಂತಹ ಸೋಲಾದರೂ ಏನೆಲ್ಲಾ ಸಂಕಷ್ಟಗಳು ಬಂದರೂ ಸತ್ಯ ಮತ್ತು ನ್ಯಾಯದ ಮಾರ್ಗದಿಂದ ಅವರು ಸರಿಯುವುದಿಲ್ಲ. ಆ ನಿರ್ಣಾಯಕ ದಿನ ವಿಜಯಿಗಳಾಗಬೇಕು ಎಂಬುದೇ ಅವರ ಗುರಿಯಾಗಿರುತ್ತದೆ. ಒಬ್ಬ ಸತ್ಯವಿಶ್ವಾಸಿ ದೇವನನ್ನು ಕಲ್ಪಿಸಿಕೊಳ್ಳುವಾಗ ಕೇವಲ ಈ ಜಗತ್ತಿನ ಒಡೆಯನೆಂದು ಮಾತ್ರ ಕಲ್ಪಿಸಿಕೊಳ್ಳದೆ, ಮರಣಾನಂತರದ ಅನಂತ ಬದುಕಿನಲ್ಲೂ ಅವನೇ ಒಡೆಯನೆಂಬುದನ್ನು ಮತ್ತು ಅಲ್ಲಿಯ ಶ್ರೇಯಸ್ಸು ಕೂಡಾ ಅವನ ಇಚ್ಛೆಯನ್ನೇ ಅವಲಂಬಿಸಿದೆ ಎಂಬುದನ್ನೂ ಕಲ್ಪಿಸಿಕೊಳ್ಳುತ್ತಾನೆ. ಪ್ರಾರ್ಥಿಸುವಾಗ, ಲೌಕಿಕ ಶ್ರೇಯಸ್ಸಿಗಾಗಿ ಮಾತ್ರ ಪ್ರಾರ್ಥಿಸದೆ, ಆ ಮರಣಾನಂತರದ ನಿರ್ಣಾಯಕ ದಿನದ ವಿಜಯಕ್ಕಾಗಿಯೂ ಪ್ರಾರ್ಥಿಸುತ್ತಾನೆ.

"ನಾವು ನಿನಗೆ ಮಾತ್ರ ಇಬಾದತ್ (ಆರಾಧನೆ) ಮಾಡುತ್ತೇವೆ ಮತ್ತು ನಿನ್ನೊಬ್ಬನಿಂದ ಮಾತ್ರ ಸಹಾಯ ಬೇಡುತ್ತೇವೆ."

ಇದು ನಾಲ್ಕನೆಯ ವಚನ. ಜೀವನದ ಯಶಸ್ಸು ಅಡಗಿರುವುದು, ನೈಜ ಸೃಷ್ಟಿಕರ್ತನ ದಾಸ್ಯದಲ್ಲಿ ಮಾತ್ರ. ಕೊನೆಯುಸಿರ ತನಕ ಸ್ಥಿರವಾಗಿ ಅವನ ದಾಸ್ಯ, ಆರಾಧನೆ ಮತ್ತು

ಆಜ್ಞಾಪಾಲನೆ ಮಾಡಿದರೆ ಮಾತ್ರ ಉಳಿವು. ಅವನ ಹೊರತು ಬೇರೆ ಯಾರೂ ಆರಾಧನೆಗಾಗಲೀ ದಾಸ್ಯಕ್ಕಾಗಲೀ ಅರ್ಹರಲ್ಲ. ಹಾಗೆಯೇ ಯಾಚನೆ ಕೂಡಾ ಅವನಿಂದ ಮಾತ್ರ. ಏನನ್ನೇ ಆಗಲೀ ಕೊಡಬಲ್ಲವನು ಅವನು ಮಾತ್ರ. ಅವನ ಹೊರತು ಬೇರೆ ಯಾರೂ ಪ್ರಾರ್ಥನೆ ಕೇಳುವವರಾಗಲೀ ಈಡೇರಿಸುವವರಾಗಲೀ ಇಲ್ಲ. ಅಲ್ಲದೆ ನೈಜ ಒಡೆಯನಾದ ಅಲ್ಲಾಹನು, ತನ್ನ ದಾಸರು ತನ್ನ ಹೊರತು ಇತರರನ್ನು ಆರಾಧಿಸುವುದನ್ನಾಗಲೀ ಇತರರೊಡನೆ ಸಹಾಯ ಯಾಚಿಸುವುದನ್ನಾಗಲೀ ಮೆಚ್ಚುವುದಿಲ್ಲ. ಅವನ ದೃಷ್ಟಿಯಲ್ಲಿ ಅದು ಮಹಾ ಪಾಪವಾಗಿದೆ.

ಆದ್ದರಿಂದ ಇಲ್ಲಿ ದಾಸನು ದೇವನೊಡನೆ ತಾನು ಅವನನ್ನು ಮಾತ್ರ ಆರಾಧಿಸುವವ ನೆಂದೂ ಅವನಿಂದ ಮಾತ್ರ ಸಹಾಯ ಕೇಳುವವನೆಂದೂ ಹೇಳಿ ತನ್ನ ನಿಲುವನ್ನು ಸ್ಪಷ್ಟ ಪಡಿಸುತ್ತಾನೆ. ಇದು ಒಂದೆಡೆ ಅಲ್ಲಾಹನೊಡನೆ ಬೇಡಲು ಒಂದು ಪೀಠಿಕೆಯಾದರೆ ಇನ್ನೊಂದೆಡೆ ಒಂದು ಪ್ರತಿಜ್ಞೆಯೂ ಆಗಿದೆ.

"ನಮಗೆ 'ಸನ್ಮಾರ್ಗ'ವನ್ನು ತೋರಿಸು."

ಇದು ಐದನೆಯ ವಚನ. ಇದರಲ್ಲಿ ಈ ಪ್ರಾರ್ಥನೆಯ ನಿಜವಾದ ಇಂಗಿತ ಅಡಗಿದೆ. ಇದರಲ್ಲಿ ಮನುಷ್ಯ ಪ್ರಕೃತಿಯ ಸ್ವಾಭಾವಿಕ ಕಳಕಳಿ ಮತ್ತು ಮನುಷ್ಯನ ಪ್ರಾಮಾಣಿಕ ಹಂಬಲ ವ್ಯಕ್ತವಾಗಿದೆ. ದಾಸನು ತನಗೆ ಜೀವನವನ್ನು ಕೊಟ್ಟ ದೇವನೊಡನೆ ಜೀವನ ವಿಧಾನವನ್ನು ಕೇಳುತ್ತಿದ್ದಾನೆ. ತನಗೆ ಸನ್ಮಾರ್ಗವನ್ನು ತೋರೆಂದು ಬೇಡುತ್ತಿದ್ದಾನೆ.

"ನೀನು ಅನುಗ್ರಹಿಸಿದವರ ಮಾರ್ಗ."

ಈ ವಾಕ್ಯದಲ್ಲಿ 'ಸನ್ಮಾರ್ಗ'ದ ಬಗ್ಗೆ ಒಂದು ವಿವರಣೆ ಇದೆ. ಜಗತ್ತಿನಲ್ಲಿ ಸನ್ಮಾರ್ಗದಲ್ಲಿ ನಡೆದವರೆಲ್ಲರೂ ಅಲ್ಲಾಹನ ಅನುಗ್ರಹಕ್ಕೆ ಪಾತ್ರರಾಗಿದ್ದರು. ಈ ರೀತಿಯಲ್ಲಿ ದೇವಾನುಗ್ರಹಕ್ಕೆ ಪಾತ್ರರಾಗುವಂತೆ, ಜೀವನ ಸಾಗಿಸಿದ ಭಾಗ್ಯವಂತ ಜನರು ನಡೆದ ಸನ್ಮಾರ್ಗವನ್ನೇ ನಮಗೂ ತೋರಿಸು ಮತ್ತು ಆ ಮೂಲಕ ನಮ್ಮನ್ನೂ ನಿನ್ನ ಅನುಗ್ರಹಕ್ಕೆ ಪಾತ್ರಗೊಳಿಸು ಎಂಬುದು ಈ ವಚನದ ಅರ್ಥ.

"ನಿನ್ನ ಕ್ರೋಧಕ್ಕೆ ಪಾತ್ರರಾದವರ ಮಾರ್ಗವಲ್ಲ. (ನೀನು ತೋರಿದ) ದಾರಿಯನ್ನು ತಪ್ಪಿ ನಡೆದವರ ಮಾರ್ಗವೂ ಅಲ್ಲ."

ಈ ಏಳನೆಯ ಮತ್ತು ಕೊನೆಯ ವಚನದಲ್ಲಿ ದಾಸನು ತಾನು ಅರಸುತ್ತಿರುವ ಸನ್ಮಾರ್ಗ ಎಂಥದೆಂಬುದನ್ನು ಇನ್ನಷ್ಟು ನಿಖರವಾಗಿ ಹೇಳಿರುವನು. ನೀನು ಮೆಚ್ಚದ ಮತ್ತು ನಿನ್ನ ಕೋಪಕ್ಕೆ ಕಾರಣವಾಗುವಂತಹ ದಾರಿಗಳಲ್ಲಿ ನಡೆಯದಂತೆ ನಮ್ಮನ್ನು ರಕ್ಷಿಸು. ನಮಗೆ ಬೇಕಾಗಿರುವುದು ನಿನ್ನ ಮೆಚ್ಚುಗೆ. ಆದ್ದರಿಂದ ನಿನ್ನ ಮೆಚ್ಚುಗೆಯ ದಾರಿ ತೋರಿಸು. ಸತ್ಯ-ಅಸತ್ಯ, ನ್ಯಾಯ-ಅನ್ಯಾಯ, ಧರ್ಮ-ಅಧರ್ಮಗಳ ಪರಿವೆಯೇ ಇಲ್ಲದೆ ಅದೆಷ್ಟೋ ಮಂದಿ ದುರ್ಮಾರ್ಗಗಳಲ್ಲಿ ಅಲೆಯುತ್ತಾರೆ. ಅಂತಹ ಅಲೆದಾಟದಿಂದ ಮತ್ತು ಅಂತಹ ದುರ್ಮಾರ್ಗಗಳಿಂದ ನಮ್ಮನ್ನು ರಕ್ಷಿಸು. ನೀನು ಪ್ರೀತಿಸುವ, ನಿನ್ನ ಮಾರ್ಗವನ್ನು ನಮಗೆ ತೋರಿಸಿಕೊಡು ಎಂದು ದಾಸನು ಬೇಡುತ್ತಿದ್ದಾನೆ.

ಆಮೀನ್ - ದೇವಾ! ನಮ್ಮ ಪ್ರಾರ್ಥನೆಯನ್ನು ಸ್ವೀಕರಿಸು.